18-12-94	1148 "
20-12-94	1020 "

ದಿನಾಂಕ 20-12-1994ರವರೆವಿಗೆ ಒಟ್ಟು 125156 ಟನ್ ಕಬ್ಬನ್ನು ಅರೆದಿರುತ್ತದೆ.

ಯಾಂತ್ರಿಕ ಅಡಚಣೆಗಳಿಂದಾಗಿ ಕಾರ್ಖಾನೆಯ ಕಬ್ಬು ಅರೆಯುವ ಕೆಲಸವು ಸುಗಮವಾಗಿ ಸಾಗದೆ ಕಬ್ಬು ಅರೆಯುವ ಪ್ರಮಾಣದಲ್ಲಿ ಕಡಿಮೆಯಾಗಿರುತ್ತದೆ.

ಹೊಸ ಟರ್ಬೈನ್‌ನ್ನು ಅಳವಡಿಸಿದರೆ ಹಂಗಾಮು ಪೂರ್ಣ ಕಬ್ಬು ಅರೆಯುವಿಕೆ ಸ್ಥಗಿತಗೊಳ್ಳುತ್ತಿದ್ದುದರಿಂದ ರೈತರ ಹಿತದೃಷ್ಟಿಯಿಂದ ರಿಪೇರಿ ಮಾಡಿಸಿ ಪುನರಾರಂಭಿಸಲಾಯಿತು. ದಿನವಹಿ ಕಬ್ಬು ಅರೆಯುವಿಕೆ ಸರಾಸರಿ 1000 ಟನ್ ಮೇಲೆ ಇದ್ದು ಇದನ್ನು ಹೆಚ್ಚಿಸಲು ಪ್ರಯತ್ನ ನಡೆದಿದೆ. ಪ್ರಸಕ್ತ ಹಂಗಾಮಿನಲ್ಲಿ ಬೆಲ್ಲದ ಬೆಲೆ ಪ್ರೋತ್ಸಾಹದಾಕವಾಗಿಲ್ಲದಿರುವುದರಿಂದ ಬೆಲ್ಲ ತಯಾರಿಕೆಗೆ ಸ್ಥಾನ ಪಲ್ಲಟವಾಗುತ್ತಿದ್ದ ಕಬ್ಬಿನ ಪ್ರಮಾಣ ಸಾಕಷ್ಟು ಕಡಿಮೆಯಾಗಿದೆ. ಇದರಿಂದಾಗಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿರುವ ಕಾರ್ಖಾನೆಗಳ ಮೇಲೆ ಒತ್ತಡ ಜಾಸ್ತಿಯಾಗಿರುವುದು ಕಂಡು ಬಂದಿದೆ. ಈ ಕಾರ್ಖಾನೆಯು ನೋಂದಾಯಿಸಿಕೊಂಡಿರುವ ಕಬ್ಬನ್ನು ಆದಷ್ಟು ಸಕಾಲದಲ್ಲಿ ಅರೆಯುವ ವ್ಯವಸತೆಗೆ ಕ್ರಮವಿಡಲಾಗುವುದು ಜೊತೆಗೆ ಈ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆದಿರುವ ಕಬ್ಬನ್ನು ಸಮೀಪದ ಕಾರ್ಖಾನೆಗಳ ಬೇಡಿಕೆಯನ್ನು ಪರಿಶೀಲಿಸಿ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಸೂಕ್ತ ಕ್ರಮವಿಡಲಾಗುವುದು.

7. ಚಿಕ್ಕನಾಯ್ಕನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ ಶೆಟ್ಟಿಕೆರೆ, ಹೋಬಳಿಗಳಲ್ಲಿ ಮಳೆಯಾಗದೆ ಮೇವಿನ ಅಭಾವ

ಶ್ರೀ ಎನ್. ಬಸವಯ್ಯ : ಚಿಕ್ಕನಾಯ್ಕನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ ಶೆಟ್ಟಿಕೆರೆ, ಹೋಬಳಿಗಳಲ್ಲಿ ಮಳೆಯಾಗದೆ ಮೇವಿನ ಅಭಾವ ನೀರಿನ ಅಭಾವ ಉಂಟಾಗಿದೆ. ಜನಗಳಿಗೆ ಕೆಲಸ ಇಲ್ಲದೆ ಅಭಾವ ಉಂಟಾಗಿರುವ ಬಗ್ಗೆ ಮಾನ್ಯ ಕಂದಾಯ ಸಚಿವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಗಮನವನ್ನು ತಮ್ಮ ಮೂಲಕ ಸೆಳೆಯಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಮಳೆ ಕಡಿಮೆಯಾಗಿದೆ. ಆದರೆ ಅಭಾವ ಪರಿಸ್ಥಿತಿ ಬರುವಂತಹ ಸಂದರ್ಭ ಏನು ಕಾಣಲಿಲ್ಲ. ಕೆರೆಗಳಲ್ಲಿ ನೀರಿಲ್ಲ ನಿಜ. ಆದರೆ ಜನಗಳಿಗೆ ಕುಡಿಯುವ ನೀರಿನ ತೊಂದರೆಯಾಗಿಲ್ಲ. ಅಂತಹ ಸಮಯ ಬಂದರೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರಿಗೆ ಹೇಳಿ ಜನತೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಎಂದು ಅವರನ್ನು ಕೇಳಿಕೊಳ್ಳುತ್ತೇವೆ. ಈಗ ಸದ್ಯಕ್ಕಂತೂ ಅಂತಹ ಪರಿಸ್ಥಿತಿ ಏನು ಅಲ್ಲಿ ಉದ್ಭವವಾಗಿಲ್ಲ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಉಪಾಧ್ಯಕ್ಷರು : ಒಂದು ವಿಷಯ. ಸಮಯವನ್ನು ನಿಗದಿ ಮಾಡಿರುವ ಪ್ರಕಾರ ಜನತಾ ದಳದ ಸದಸ್ಯರಿಗೆ 5 ಗಂಟೆ. ಅದರಲ್ಲಿ 2 ಗಂಟೆಯನ್ನು ಈಗಾಗಲೇ ಅವರು ಪೂರೈಸಿದ್ದಾರೆ. ಬಿ.ಜೆ.ಪಿಯವರಿಗೆ 4 ಗಂಟೆ, ಅದರಲ್ಲಿ 1-30 ಗಂಟೆಯನ್ನು ಅವರು ಪೂರೈಸಿದ್ದಾರೆ. ಕಾಂಗ್ರೆಸ್ ಸದಸ್ಯರಿಗೆ 4 ಗಂಟೆ. ಕೆ.ಸಿ.ಪಿ.ಯವರಿಗೆ 1 ಗಂಟೆ. ಸ್ವತಂತ್ರ ಸದಸ್ಯರಿಗೆ 2 ಗಂಟೆ. ಇದು ನಿಮ್ಮ ನಿಗಧಿತ ಕಾರ್ಯಕ್ರಮ. ಒಂದು ವೇಳೆ ಈ ನಿಗಧಿತ ಸಮಯದಲ್ಲಿ ಅಂದರೆ ನಾಳೆ ಸಂಜೆಯೊಳಗೆ ಪೂರೈಸತಕ್ಕಂತಹದ್ದು ಅತೀ ಅವಶ್ಯ. ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರು ಸಹಕಾರ ಕೊಡಬೇಕು. ಸಮಯವನ್ನು ಸೀಮಿತಗೊಳಿಸಬೇಕು. ಈಗ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಬೇಕು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಸರ್ಕಾರದವರು ಗೌರ್ನರ್ ಮುಖಾಂತರ ತಮ್ಮ ಭಾಷಣವನ್ನು ಮಾಡಿಸಿದ್ದಾರೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ತಮ್ಮ ನೀತಿ ನಿರೂಪಣೆ ಮತ್ತು ಹೊಸ ಕಾರ್ಯಕ್ರಮಗಳ ಬಗ್ಗೆ ಏನಾದರೂ ಹೇಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಅವರ ಮ್ಯಾನಿಫೆಸ್ಟೋದಲ್ಲಿ ಹೇಳಿದಂತಹ ಅನೇಕ ಮಾತುಗಳು ಮತ್ತು ಆಶ್ವಾಸನೆಗಳು ಕೂಡ ಈ ಒಂದು ಗೌರ್ನರ್ ಸ್ಪೀಚ್‌ನಲ್ಲಿ ಅವರು ಪ್ರತಿಬಿಂಬಿಸುತ್ತಾರೆ. ಅದಕ್ಕೆ ಸೂಕ್ತವಾದ ವ್ಯವಸ್ಥೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರ 8 ಪುಟದ ಭಾಷಣವನ್ನು ನೋಡಿದ ಮೇಲೆ ಅದರಲ್ಲಿ ಯಾವ ಸತ್ಯಾಂಶವಾಗಲಿ, ಯಾವ ಹುರುಳೂ ಕೂಡ ಇಲ್ಲ. ಹೊಸ ಕಾರ್ಯಕ್ರಮ ಇಲ್ಲ. ಅವರು ಹೇಳಿದಂತಹ ಮಾತಿಗೆ ಪರಿಹಾರ ಕೊಡತಕ್ಕಂತಹದ್ದು ಇಲ್ಲ. ಅಥವಾ ಏನು ನಾವು ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ ಎನ್ನತಕ್ಕಂತಹದ್ದರ ಬಗ್ಗೆಯೂ ಕೂಡ ಅವರು ಸ್ಪಷ್ಟವಾಗಿ ಹೇಳಿಲ್ಲ.

ಬಹುಶಃ ಆ ಒಂದು ಭಾಷಣ ನನ್ನ ಪ್ರಕಾರ ಒಂದು ವೇಗ್ ಸ್ಟೇಟ್‌ಮೆಂಟ್. ಸುಮ್ಮನೆ ತರಾತುರಿಯಾಗಿ ನಾವು ಆರಿಸಿ ಬಂದಿದ್ದೇವೆ, ನಾವು ಆರಿಸಿ ಬಂದಿದ್ದೇವೆ, ನಾವು ನಾನ್ ಪ್ಲಾನ್ ಖರ್ಚಿನಲ್ಲಿ ಕಡಿವಾಣ ಹಾಕುತ್ತೇವೆ. ನಾವು ಎಕಾನಾಮಿಕ್ಕಾಗಿ ಪಂಪುಸೆಟ್ ವಿದ್ಯುತ್ ಬಳಕೆ ಏನು ರೈತರು ಮಾಡುತ್ತಿದ್ದಾರೆ ಅದಕ್ಕೆ ಆಕ್ಚ್ಯುಯಲ್ ಕಾಸ್ಟ್ ವರ್ಕ್ ಔಟ್ ಮಾಡಿ ಒಂದು ದರವನ್ನು ಫಿಕ್ಸ್ ಮಾಡುತ್ತೇವೆ. ಟ್ರಾನ್ಸ್‌ಫಾರ್ಮರ್ಸ್ ಸರಿಮಾಡುತ್ತೇವೆ, ಆಡಳಿತ ಸರಿಪಡಿಸುತ್ತೇವೆ, ಎಫಿಷಿಯನ್ಸಿ ತರುತ್ತೇವೆ ಎಂದು ಹೇಳಿ, ಹೀಗೆ ವೇಗ್ ಆಗಿ ಜನರಲ್ ಆಗಿ ಸ್ಟೇಟ್‌ಮೆಂಟ್ ಕೊಟ್ಟಿದ್ದು ಅದರಲ್ಲಿ ಇದೆ. ತಾವು ಒಂದು ಮಾನಿಫೆಸ್ಟೋ ಕೊಟ್ಟು ಅಧಿಕಾರಕ್ಕೆ ಬಂದಿದ್ದೀರಿ. ಇವತ್ತು ಜನರಿಗೆ ಕಾರ್ಯಕ್ರಮ ಹೇಳಿ ಬಂದಿದ್ದೀರಿ. ಬಂದಾಗ, ಆ ಕಾರ್ಯಕ್ರಮಗಳ ಮೇಲೆ,ಯಾವ ರೀತಿಯಾಗಿ ತಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೀರಿ ಎನ್ನುವುದು ಎಲ್ಲೂ ಸ್ಪಷ್ಟ ಇಲ್ಲ. ರಾಜ್ಯಪಾಲರ ಭಾಷಣದ 1ನೇ ಪುಟದಿಂದ 8ನೇ ಪುಟದವರೆಗೆ ಹೋದರೂ ಕೂಡ ಎಲ್ಲೂ ಕೂಡ ನಿರ್ದಿಷ್ಟವಾದ ಕಾರ್ಯಕ್ರಮಕ್ಕೆ ಹಣವನ್ನು ಒದಗಿಸತಕ್ಕದ್ದು ಆಗಲೀ ಅಥವಾ ಹೇಳತಕ್ಕಂತಹದ್ದನ್ನು ಅವರು ಸ್ಪಷ್ಟವಾಗಿ ಹೇಳಿಲ್ಲ. ಜನತಾ ದಳಕ್ಕೆ ಹೆಚ್ಚಿನ ಜನ ಒಳವು ಕೊಟ್ಟು ಇವತ್ತು ಅಧಿಕಾರಕ್ಕೆ ತಂದಿದ್ದಾರೆ. ನಾವು ಈಗ ಸದ್ಯಕ್ಕೆ ಕೊಟ್ಟಂತಹ ಆಶ್ವಾಸನೆ ಪ್ರಕಾರ ನಾವು ನಡೆದುಕೊಳ್ಳತಕ್ಕ ಅವಶ್ಯಕತೆ ಇಲ್ಲ ಎಂದು ಬಹುಶಃ ಅವರು ತಿಳಿದುಕೊಂಡಿರಬಹುದು. ಇವತ್ತು ಕಾಂಗ್ರೆಸ್ ಪಕ್ಷ ಹಾಗೂ ಅವರಿಗೆ ಹೆಚ್ಚಿನ ವ್ಯತ್ಯಾಸ ಇಲ್ಲ. ಇವತ್ತು ಅವರು 33 ಪರ್ಸೆಂಟ್ ಓಟು ಪಡೆದುಕೊಂಡು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಸುಮಾರು 116 ಜನರು ಬಂದಿದ್ದಾರೆ. ಕಾಂಗ್ರೆಸ್ ಪಕ್ಷ 27 ಪರ್ಸೆಂಟ್ ತೆಗೆದುಕೊಂಡು 36 ಸ್ಥಾನಗಳನ್ನು ಪಡೆದು ಇವತ್ತು ವಿರೋಧಪಕ್ಷದಲ್ಲಿ 2ನೇ ಸ್ಥಾನದಲ್ಲಿ ಇದ್ದಾರೆ. ಕರ್ನಾಟಕ ಕಾಂಗ್ರೆಸ್‌ನ ಶ್ರೀ ಬಂಗಾರಪ್ಪನವರ ನೇತೃತ್ವದ ಪಕ್ಷಕ್ಕೆ ಸುಮಾರು 6 ಪರ್ಸೆಂಟ್ ಮತ ಬಂದಿದೆ. ಈ ರೀತಿ ಇರುವಾಗ ಎಲ್ಲಾ ಪಕ್ಷಗಳಿಗೆ ಜನರ, ಮತದಾರರ ಬೆಂಬಲ ಎಷ್ಟು ಇದೆ ಎನ್ನತಕ್ಕದ್ದು ಈಗಾಗಲೇ ತಮ್ಮ ಮುಂದೆ ಒಂದು ಚಿತ್ರ ಇದೆ. ಎಂದರೆ ನಿಮಗೆ ಮತ್ತು ಕಾಂಗ್ರೆಸ್‌ಗೆ ಹೆಚ್ಚಿನ ವ್ಯತ್ಯಾಸ ಇಲ್ಲ, ಕೇವಲ 6 ಪರ್ಸೆಂಟ್ ಮಾತ್ರ ವ್ಯತ್ಯಾಸ ಇದೆ. ಆದರೆ ತಾವು ಭ್ರಮೆಯಲ್ಲಿ ಇರಬೇಡಿ, ತಾವು 51 ಪರ್ಸೆಂಟ್‌ನಿಂದ ಬಂದಿದ್ದೇವೆ ಎಂದು ತಮ್ಮ ತಲೆಯಲ್ಲಿ ಇರಬಾರದು ಎಂದು ನಾನು ಇದನ್ನು ಹೇಳುತ್ತಿದ್ದೇನೆ. ಮತವನ್ನು ನಾವು ಇಲ್ಲಿ ಹೋಲಿಸಿ ನೋಡಿದಾಗ 68 ಲಕ್ಷ ಮತವನ್ನು ತಾವು ತೆಗೆದುಕೊಂಡಿದ್ದೀರಿ. ಕಾಂಗ್ರೆಸ್ ಪಕ್ಷಕ್ಕೆ 59 ಲಕ್ಷ ಮತಗಳು

ಬಂದಿವೆ. ಯಾವುದೇ ದೃಷ್ಟಿಯಿಂದ ನೋಡಿದರೂ ಕೂಡ ಬಹಳ ಬಹುಮತದಿಂದ ಆಗಲೀ ಅಥವಾ ಭಾರಿ ಜನಬೆಂಬಲದಿಂದ ತಾವು ಬಂದಿದ್ದೇವೆ ಎಂದು ಹೇಳಿ

ತಾವು ತಿಳಿದುಕೊಂಡಿದ್ದರೆ ಅಥವಾ ಆ ಒಂದು ಗುಂಗಿನಲ್ಲಿ ಇದ್ದರೆ ಅದು ತಪ್ಪು ಎನ್ನತಕ್ಕದ್ದನ್ನು ನಾನು ಸ್ಪಷ್ಟಪಡಿಸುತ್ತೇನೆ. ನಾನು ಈ ಮಾತನ್ನು ಏಕೆ ಹೇಳಬೇಕಾಗಿದೆ ಎಂದರೆ ತಮ್ಮ ಇತ್ತೀಚಿನ ವರ್ತನೆ ನೋಡಿದಾಗ ಅದೇ ಒಂದು ಗುಂಗಿನಲ್ಲಿ ನೀವು ಇದ್ದೀರೇನೋ ಎಂದು ತಿಳಿದುಕೊಳ್ಳಬೇಕಾಗುತ್ತದೆ. ತಾವು ಅಧಿಕಾರ ವಹಿಸಿಕೊಂಡು ಕೇವಲ 15-16 ದಿವಸ ಆಯಿತು. ನಿಮ್ಮ ಆಡಳಿತದ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ 16 ದಿವಸದಲ್ಲಿ ಯಾರಿಗೂ ಕೂಡ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಅದರ ಬಗ್ಗೆ ಹೆಚ್ಚಿನ ಮಾತನಾಡತಕ್ಕ ಅವಶ್ಯಕತೆ ಇಲ್ಲ. ಆದರೆ ಜನರ ಮುಂದೆ ನೀವು ಏನು ಹೇಳಿಕೊಂಡು ಅಧಿಕಾರಕ್ಕೆ ಬಂದಿರಿ ಅದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏಕೆ ಹೇಳಲಿಲ್ಲ? ತಮಗೆ ಏನು ಪುರುಸೊತ್ತು ಸಿಗಲಿಲ್ಲವೋ? ಅದರ ಬಗ್ಗೆ ವಿಚಾರ ಮಾಡಲಿಲ್ಲವೋ? ಏಕೆ ಎನ್ನತಕ್ಕ ಪ್ರಶ್ನೆ ಬರುತ್ತದೆ. ಫೆಬ್ರವರಿಯಲ್ಲೋ ಮಾರ್ಚ್‌ನಲ್ಲೋ ಸದನ ಕರೆದು ಆಗ ಒಂದು ಜಂಟಿ ಅಧಿವೇಶನ ಆಗುತ್ತದೆ. ಪುನಃ ರಾಜ್ಯಪಾಲರಿಂದ ಇನ್ನೊಂದು ಭಾಷಣ ಮಾಡಿಸುತ್ತೇವೆ. ಇದಕ್ಕಿಂತಲೂ ದೊಡ್ಡ ಪುಸ್ತಕವನ್ನು ಪ್ರಿಂಟ್ ಮಾಡಿಸುತ್ತೇನೆ, ಅದರಲ್ಲಿ ನಾವು ಎಲ್ಲವನ್ನೂ ಸವಿಸ್ತಾರವಾಗಿ ಹೇಳುತ್ತೇವೆ ಎನ್ನತಕ್ಕದ್ದನ್ನು ಹೇಳಬಹುದು. ಆದರೆ ನೀವು ಯಾವಾಗ ಹಿಂದಿನ ಸರ್ಕಾರದ ಕಾರ್ಯಕ್ರಮಗಳನ್ನು ಒಪ್ಪುವುದಿಲ್ಲವೆಂದಾಗ ಈ ಮೂರು ತಿಂಗಳಿಗಾದರೂ ನಿಮ್ಮ ಕಾರ್ಯಕ್ರಮ ಬೇಕಲ್ಲವೇ? ಡಿಸೆಂಬರ್, ಜನವರಿ, ಫೆಬ್ರವರಿ ಮತ್ತು ಮಾರ್ಚ್ - ಈ ಮೂರ್ನಾಲ್ಕು ತಿಂಗಳಿಗೆ ನಿಮ್ಮ ಕಾರ್ಯಕ್ರಮ ಏನಿದೆ, ಅದರ ಬಗ್ಗೆ ಏನು ಹೇಳಿದ್ದೀರಿ, ಅದೂ ಕೂಡ ಇಲ್ಲ ಎಂದಾಗ ಈ ಜನರ ಅಭಿವೃದ್ಧಿ ಬಗ್ಗೆ ಆಗಲೀ, ಅಥವಾ ರಾಜ್ಯದ 5 ಕೋಟಿ ಜನತೆಯ ಕಲ್ಯಾಣದ ಬಗ್ಗೆ ಇನ್ನೂ ಚಿಂತನೆ ಮಾಡಿಲ್ಲ ಎನ್ನತಕ್ಕದ್ದನ್ನು ಇದು ತೋರಿಸುತ್ತದೆ. ಎರಡನೆಯದಾಗಿ, ನಿನ್ನೆ ನಾವು ಈ ಮಾತನ್ನು ಪ್ರಸ್ತಾಪ ಮಾಡಿದೆವು. ನೀವು ಅಧಿಕಾರ ತೆಗೆದುಕೊಳ್ಳಬೇಕಾದರೂ ಗಲಾಟೆಹೊಡತಪೆಟ್ಟು. ಮುಖ್ಯ ಮಂತ್ರಿಗಳ ಚುನಾವಣೆ ಆಗಬೇಕು ಎಂದರೂ ಕೂಡ ಅದಕ್ಕೆ ಹೊಡತಪೆಟ್ಟು. ಅವತ್ತು ಇಡೀ ನಮ್ಮ ವಿಧಾನಸೌಧದ ಗ್ಲಾಸ್‌ಗಳು ಹೊಡೆದು, ಚಿಂದಿಚಿಂದಿ ಮಾಡಿ, ಪುಡಿಪುಡಿ ಮಾಡಿ, ಗೇಟ್‌ಗಳನ್ನು ಕ್ರಷ್ ಮಾಡಿ ಕೊನೆಗೆ ಎಲ್ಲಿಗೆ ಹೋಯಿತು ಎಂದರೆ ತಮ್ಮ ಮುಖಂಡರಾದಂತಹ ರಾಮಕೃಷ್ಣ ಹೆಗಡೆಯವರು ಕೂಡ ಏನು ಹೇಳಿದರು? ನಾನು ಯಾರಿಗೋ ಮುಖ್ಯಮಂತ್ರಿ ಮಾಡುವುದಕ್ಕೆ ಹೋಗಿ, ಚಪ್ಪಲಿ ಏಟು ತಿಂದೆ ಎನ್ನತಕ್ಕಂತಹ ಮಾತು ಅವರ ಬಾಯಿಂದಲೇ ಬಂತು. ಅಂದರೆ ಚಪ್ಪಲಿ ಏಟು ತಿನ್ನೋದ್ರಿಂದ ಪ್ರಾರಂಭ ಆಗಿದ್ದು, ಅನೇಕ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಕೊಲೆಯವರೆಗೆ ಇದು ನಡೆದಿದೆ. ನಿಮ್ಮ ಮುಖಂಡರಿಗೆ ನೀವು ಚಪ್ಪಲಿಯಲ್ಲಿ ಹೊಡೆಯುವುದು ಅಲ್ಲದೇನೇ. ಅವರ ಶರ್ಟ್‌ಗಳನ್ನು ಹರಿಯುವುದಲ್ಲದೇನೇ, ಅವರಿಗೆ ಬಾತ್ ರೂಮ್‌ನಲ್ಲಿ ಕೀಲಿ ಹಾಕೋದು ಅಲ್ಲದೇನೇ, ಇವತ್ತಿನ ದಿವಸ ಯಾವ ಜನ ಮತ ಕೊಟ್ಟಿದ್ದಾರೋ ಆ ಜನಾಂಗಕ್ಕೂ ಕೂಡ ಇವತ್ತು ತೊಂದರೆ ಕೊಡತಕ್ಕಂತಹ ಪ್ರಯತ್ನವನ್ನು...

ಶ್ರೀ ಆರ್.ಎಲ್. ಜಾಲಪ್ಪ : ಇವರು ಹೇಳಿದರು, ನಿಮ್ಮ ಮುಖಂಡರಿಗೆ ಚಪ್ಪಲಿಯಲ್ಲಿ ಹೊಡೆದಿರಿ ಎಂದು ಹೇಳಿದರು. ದಯವಿಟ್ಟು ಕ್ಷಮಿಸಿ. ಯಾರೋ ಕುಡಿದುಕೊಂಡು ಬಂದವರು. ಚಪ್ಪಲಿ ಎಸೆದಿರಬೇಕು. ನಾವು ಹೊಡೆದೆವು ಎಂದು ಹೇಳಿದ್ದಾರೋ ಜನತಾದಳದವರು ಹೊಡೆದರು ಎಂದು ಹೇಳಿದ್ದಾರೋ ಯಾರೋ ಕುಡಿದಿದ್ದೋರು ಬಂದು ಹೊಡೆದಿದ್ದಾರೆಂದು ಹೇಳಿರಬಹುದು. ತಮಗೂ ಬಹಳ ಎಕ್ಸ್‌ಪೀರಿಯನ್ಸ್ ಇದೆ, ಕಾಮನ್‌ಸೆನ್ಸ್ ಇದೆ. ಅದನ್ನು ಇಂತಹ ಸಮಯದಲ್ಲಿ ತಾವು ಸ್ವಲ್ಪ ಉಪಯೋಗಿಸಿಕೊಳ್ಳಿ.

ಉಪಾಧ್ಯಕ್ಷರು : ಮಾನ್ಯ ಖರ್ಗೆಯವರಿಗೂ ಮತ್ತು ಇತರ ಸದಸ್ಯರುಗಳಿಗೂ ಒಂದು ವಿನಂತಿ. ಸದನದಲ್ಲಿ ಇರಲಾರದವರ ಬಗ್ಗೆ ಪ್ರಸ್ತಾಪ ಮಾಡತಕ್ಕದ್ದು ಅಷ್ಟು ಸಮಂಜಸ ಅಲ್ಲ. ಅವರು ಇಲ್ಲಿ ಇಲ್ಲ. ಇರಲಾರದವರ ಬಗ್ಗೆ ಪ್ರಸ್ತಾಪ ಮಾಡುವುದು ಬೇಡ.

ಡಾ॥ ಜೀವರಾಜ ಆಳ್ವ : ಘಟನೆಗಳ ಬಗ್ಗೆ ಪ್ರಸ್ತಾಪ ಮಾಡಿದರು.

ಶ್ರೀ ಆರ್.ಎಲ್. ಜಾಲಪ್ಪ : ಆವತ್ತು ಅಧಿಕಾರದಲ್ಲಿ ಇದ್ದದ್ದು ಅವರ ಸರ್ಕಾರ. ಅವರು ಅದನ್ನು ಸರಿಯಾಗಿ ನೋಡಿಕೊಳ್ಳಬೇಕಾಗಿತ್ತು. They have failed in their duties. ನಾವು ಇನ್ನೂ ಆವತ್ತು ಛಾರ್ಜ್ ಅಸ್ಯೂಮ್ ಮಾಡಿರಲಿಲ್ಲ.

ಡಾ॥ ಜೀವರಾಜ ಆಳ್ವ : ಈ ಆರ್ಗ್ಯುಮೆಂಟನ್ನು ನಾನು ಒಪ್ಪುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ನಾವು ಸ್ವೇರಿಂಗ್ ಮಾಡುವವರೆಗೂ ಅವರದ್ದೇ ಸರ್ಕಾರ. ಆಗ ಅವರು ಕ್ರಮ ತೆಗೆದುಕೊಳ್ಳಬೇಕಾಗಿತ್ತು. They should have taken action.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಬಹಳ ಸೆನ್ಸೀಟೀವ್ ಆದರು. ಮಾಡುವಾಗ ಆಗಿದ್ದರೆ ಚೆನ್ನಾಗಿ ಇತ್ತು. ಪಾಪ ಅಲ್ಲಿ ಹೋಗಿ.

ಶ್ರೀ ಆರ್.ಎಲ್. ಜಾಲಪ್ಪ : ಸುಮ್ಮನೆ ಯಾವೋನೋ ಬರುತ್ತಾನೆ. ಮಾಡಿದರಪ್ಪ. ಅದಕ್ಕೆ ಏನು ಮಾಡುವುದಕ್ಕಾಗುತ್ತದೆ?

ಡಾ॥ ಜೀವರಾಜ ಆಳ್ವ : ಯಾರೋ ಮಾಡುತ್ತಾರೆ ಎನ್ನುತ್ತಾರೆ. ಪ್ರಮಾಣವಚನ ಸ್ವೀಕರಿಸುವ ದಿನ ಒಂದು ಐತಿಹಾಸಿಕ ನಿರ್ಧಾರವನ್ನು ಜನತೆ ಕೊಟ್ಟಿದ್ದಾರೆ. ಯಾರು ಯಾರೋ ಮಾಡುತ್ತಾರೆ ಎನ್ನುತ್ತಾರೆ. ಇವತ್ತು ಅಶೋಕಸ್ಥಂಭದ ಮೇಲೆ ಪಕ್ಷದ ಕಾರ್ಯಕರ್ತರು ಪಕ್ಷದ ಫ್ಲಾಗ್ ಹಾಕುವುದಕ್ಕೆ ಹೋಗುತ್ತಾರೆ. ವಿಧಾನಸೌಧದ ಗಾಜು ಹೊಡೆಯುತ್ತಾರೆ. ನಿಮ್ಮ ಶಾಸಕರು ನಿಮ್ಮ ನಾಯಕರ ಬಗ್ಗೆ ಮಾತನಾಡುವುದು ಬೇಡ. ಒಂದು ಪವಿತ್ರ ಕ್ಷೇತ್ರವನ್ನು ಅಪವಿತ್ರ ಮಾಡಿದ್ದುದು ಕೂಡ ಇಲ್ಲ ಎಂದು ಹೇಳುತ್ತೀರಾ? ತಾವೂ ಕೂಡ ಗೃಹ ಸಚಿವರಾಗಿ ಹಿಂದೆ ಕೆಲಸ ಮಾಡಿದ್ದೀರಿ. ಇವತ್ತು ಹೋಮ್ ಮಿನಿಸ್ಟರ್ ಹೇಳಲಿ. ಆವತ್ತು ಏನು ಅನ್ಯಾಯವಾಗಿದೆ, ಅದರ ಬಗ್ಗೆ ವಿಚಾರಣೆ ಮಾಡಬೇಕೆಂದು ಮಾಡಿದ್ದೀರಿ. ನೀವು ಈ ರೀತಿ ಮಾಡಿದವರನ್ನು ಪನಿಷ್ ಮಾಡುತ್ತೇವೆಂದು ಹೇಳಿ. ಅದನ್ನು ಬಿಟ್ಟು, ಯಾರೋ ಮಾಡಿದರು ಎಂದು ಹೇಳಿದರೆ ಹೇಗೆ? ಯಾರು ಮಾಡಿದರು ಎಂಬುದು ಗೊತ್ತಾಗಲಿ. ಯಾರು ಬಸ್ಸುಗಳಲ್ಲಿ ಜನರನ್ನು ತಂದರೆಂಬುದೂ ಹೊರಕ್ಕೆ ಬರಲಿ ಮತ್ತು ಯಾವ ಯಾವ ಜಿಲ್ಲೆಯಿಂದ ಬಂದರು ಎಂಬುದೂ ಬರಲಿ. ಇದು ಜನತಾ ದಳದ ಆಫೀಸಿನಲ್ಲಿ ನಡೆದರೆ ತಪ್ಪಲ್ಲ. ಇವತ್ತು ವಿಧಾನ ಸೌಧದಲ್ಲಿ ನಡೆದಿದೆ. ಈ ಕ್ಷೇತ್ರವನ್ನು ಅಪವಿತ್ರ ಮಾಡಿದ್ದಾರೆ. ಏನೂ ಆಗಿಲ್ಲವೆಂದು ಮಾನ್ಯ ಜಾಲಪ್ಪನವರಂಥ ಹಿರಿಯ ಸಚಿವರು ಹೇಳಿದರೆ, ಇದಕ್ಕಿಂತ ತಪ್ಪು ಬೇರೆ ಇಲ್ಲ. ಏಕೆಂದರೆ, ತಪ್ಪಾಗಿದೆ ತಪ್ಪಾಗಿದೆ ಎಂದು ಜನರ ಕ್ಷಮೆ ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ : ಕ್ಷಮೆ ಕೇಳಬೇಕಾದದ್ದು ನಾವಲ್ಲ. ಮಾನ್ಯ ಮುಖ್ಯಮಂತ್ರಿಗಳು, ಅವರ ಔದಾರ್ಯದಿಂದ ಈಗಾಗಲೇ ಕ್ಷಮೆ ಕೇಳಿದ್ದಾರೆ. ಈ ಘಟನೆ ಬಗ್ಗೆ ಈಗಾಗಲೇ ವಿಚಾರಣೆಗೆ ಆದೇಶ ಮಾಡಿದ್ದೇವೆ.

ಡಾ॥ ಜೀವರಾಜ ಆಳ್ವ : ಇದರಲ್ಲಿ ಔದಾರ್ಯ ಏನು ಬಂತು ಸ್ವಾಮಿ, It is his duty as a Chief Minister who was sworn in. He owed an explanation

to the people of Karnataka. ಜನತಾ ದಳದ ಕಾರ್ಯಕರ್ತರೇ ಇರಲಿ, ಈ ಅಭಿಮಾನಿಗಳಿಂದ ಅನ್ಯಾಯವಾಗಿದೆ ಎಂದು ಒಪ್ಪಿಕೊಳ್ಳಬೇಕು. ಮತ್ತು ಒಪ್ಪಿಕೊಳ್ಳುವಂಥ ಸಜ್ಜನಿಕೆ ಮಾಡಿದ್ದಾರೆ. ಆದರೆ, ಔದಾರ್ಯ ಎಂದು ಹೇಳಬೇಡಿ.

ಶ್ರೀ ಆರ್.ಎಲ್. ಜಾಲಪ್ಪ : ಇದರಲ್ಲಿ ಪೂರ್ತಿಯಾಗಿ ಜನತಾದಳದ ಕಾರ್ಯಕರ್ತರು ಇದ್ದಾರೋ, ಇಲ್ಲವೋ ಎನ್ನುವುದು ಮತ್ತು ಬೇರೆ ಘಟನೆಗಳ ಬಗ್ಗೆಯೂ ಕೂಡ ಈಗಾಗಲೇ ವಿಚಾರಣೆಗೆ ಆದೇಶ ಮಾಡಿದ್ದೇವೆ. ನಾನು ಆಕ್ಷೇಪಣೆ ಮಾಡಿದ್ದು ಇಷ್ಟು. ಸನ್ಮಾನ್ಯ ಖರ್ಗೆಯವರು ಮಾತನಾಡುವಾಗ "ನೀವು ಚಪ್ಪಲಿಯಲ್ಲಿ ಹೊಡೆದಿರಿ" ಎಂದು ಹೇಳಿದಿರಿ. ಆ ಮಾತು, ದಯಮಾಡಿ ಆಡಬೇಡಿ ಎಂದು ಹೇಳಿದೆ.

ಉಪಾಧ್ಯಕ್ಷರು : ಆ ಪದ ಬಳಕೆ ಬೇಡ ಎಂದು ಅವರು ಹೇಳಿದ್ದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಬಾಯಿಂದ ಹೇಳಿದ್ದರೆ, ನಾನು ಒಪ್ಪುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ನಮಗೆ ಗೌರವ ಇದೆ. ಅವರು ಹಿರಿಯ ಸದಸ್ಯರು, ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಸುಮಾರು 5-6 ವರ್ಷಗಳ ಕಾಲ ರಾಜ್ಯಸಭೆಯ ಸದಸ್ಯರಾಗಿದ್ದರು. ಇವತ್ತು ಕೂಡ ನಿಮ್ಮ ಪಕ್ಷದ ರಾಷ್ಟ್ರಮಟ್ಟದ ನಾಯಕರೂ ಆಗಿದ್ದಾರೆ. ಅವರು ಹಿರಿಯರಿದ್ದಾರೆ. ಅವರನ್ನು ನಾವು ಕೂಡ ಗೌರವಿಸುತ್ತೇವೆ. ಆದರೆ, ಇಲ್ಲಿ ಅವರು ಹೇಳಿದ ಮಾತನ್ನು ಹೇಳುತ್ತಿದ್ದೇನೆಯೇ ಹೊರತಾಗಿ, ನಾನು ಇಂತಹವರೇ ಮಾಡಿದ್ದಾರೆಂದು ಹೇಳುತ್ತಿಲ್ಲ. ಅವರೇ ಹೇಳಿದ್ದಾರೆ. ನಾನು ಯಾರಿಗೋ ಮುಖ್ಯಮಂತ್ರಿ ಮಾಡುವುದಕ್ಕೆ ಹೋಗಿ, ಯಾರ ಕೈಯಿಂದಲೋ ಹೊಡೆಸಿಕೊಂಡೆ" ಎಂದು. ನಾನು ಹೇಳತಕ್ಕಂಥ ತಾತ್ಪರ್ಯ ಇಷ್ಟೆ. ಅಂದಿನಿಂದ ಪ್ರಾರಂಭವಾಗಿದ್ದು, ಲೀಡರ್ ಚುನಾವಣೆಯಿಂದ ಪ್ರಾರಂಭವಾಗಿದ್ದು, ಈ ಗಲಭೆ ಮುಂದುವರಿದುಕೊಂಡು, ಅನೇಕ ಕಡೆ ಇಂತಹ ಗಲಭೆಗಳು ನಡೆದಿವೆ. ಗೋಕಾಕ್‌ನಲ್ಲಿ ನಡೆಯಿತು, ಕೋಲಾರದಲ್ಲಿ ನಡೆಯಿತು. ಮಧುಗಿರಿಯಲ್ಲಿ ನಡೆಯಿತು. ಸೌತ್ ಕೆನರಾ ಭಾಗಗಳಲ್ಲಿ ಹೆಚ್ಚಿನ ಗಲಾಟೆಗಳು ನಡೆದಿವೆ. ಉತ್ತರ ಕರ್ನಾಟಕದಲ್ಲಿ, ಗೋಕಾಕ್ ಬಿಟ್ಟರೆ ಬೇರೆ ಕಡೆ ಏಕೆ ನಡೆಯಲಿಲ್ಲ? ಬೆಂಗಳೂರು ಅಕ್ಕಪಕ್ಕದಲ್ಲಿ ಎಲ್ಲಿಯೂ ಕೂಡ ಈ ರೀತಿಯಾದ ಕೊಲೆಗಳು ನಡೆಯಲಿಲ್ಲ. ಈ ರೀತಿಯಾಗಿ ಹಲವಾರು ಮನೆಗಳಿಗೆ ನುಗ್ಗಿ ಲೂಟಿ ಮಾಡಿದ್ದುದು ಹಿಂದೆ ಇಲ್ಲ. ನೀವೇ ಹೇಳಿ, ನಿಮ್ಮಲ್ಲಿ ಪೊಲೀಸ್ ರಿಪೋರ್ಟ್ ಇದೆ. ಇವರು ಅಧಿಕಾರ ವಹಿಸಿಕೊಂಡ ತಕ್ಷಣ ಇಂತಹ ಗಲಭೆಗಳು, ಈ ಭಾಗದಲ್ಲಿ ಹೆಚ್ಚಿನ ರೀತಿಯಲ್ಲಿ ಪ್ರಾರಂಭ ಆಗುವುದಕ್ಕೆ ಕಾರಣವೇನು? ಅಂದರೆ, ಇದಕ್ಕೆ ಯಾರದಾದರೂ ಕುಮ್ಮಕ್ಕು ಅಥವಾ ಸರ್ಕಾರದಲ್ಲಿ ನಮಗೆ ಪ್ರೋತ್ಸಾಹ ಸಿಗುತ್ತದೆಂದು ಹೇಳಿ, ಸಮಾಜಘಾತುಕ ಶಕ್ತಿಗಳು, ಅವರೇ ಕಾನೂನನ್ನು ಕೈಗೆ ತೆಗೆದುಕೊಂಡು, ಈ ರೀತಿ ಮಾಡುತ್ತಿದ್ದಾರೋ ಎನ್ನುವುದು ಗೊತ್ತಾಗಬೇಕು. ಇದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಇದರ ಬಗ್ಗೆ ನಿನ್ನೆ ದೀರ್ಘವಾಗಿ ಚರ್ಚೆಯಾಗಿದೆ. ಸರ್ಕಾರದ ಉತ್ತರದಿಂದ ಸಮಾಧಾನವಾಗದೇ ಸಭಾತ್ಯಾಗವನ್ನೂ ಮಾಡಿದ್ದಾರೆ. ಪುನಃ ಅದನ್ನೇ ಏಕೆ ಹೇಳುತ್ತಿದ್ದಾರೆಂದು ಅರ್ಥವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜ್ಯಪಾಲರ ಭಾಷಣದ ಮೇಲೆ ಸರಿಯಾದ ಉತ್ತರವನ್ನು ಕೊಡುತ್ತೇವೆಂದು ನೀವೇ ಹೇಳಿದಿರಿ. ಅಂದರೆ, ಯಾವ ರೀತಿಯಾಗಿ 15 ದಿವಸಗಳಲ್ಲಿ ಇಂತಹ ಘಟನೆಗಳು ನಡೆದಿವೆ ಎಂಬುದು ನಿಮಗೂ ಗೊತ್ತಿದೆ. ಆದರೆ, ಏಕೋ ಬಿಚ್ಚುಮನಸ್ಸಿನಿಂದ ಹೇಳುತ್ತಾ ಇಲ್ಲ. ಈ ಘಟನೆಗೆ ಯಾರು ಕಾರಣ ಎಂದು ನಿಮಗೂ ಗೊತ್ತಿದೆ, ಅನೇಕ ಕಡೆ ನಿಮಗೂ ಅನುಭವವಾಗಿದೆ.

ನಿಮಗೂ ಕೂಡ ಒಂದೊಂದು ಸಾರಿ ಅನುಭವಕ್ಕೆ ಬಂದಾಗ, ಸ್ವಲ್ಪ ಎಚ್ಚರವಾಗುತ್ತೇವೆಂದು ಬಾಯಿಬಿಟ್ಟು ಹೇಳುವುದಿಲ್ಲ, ನಿಮಗೆ ಯಾರ ಯಾರ ಕಾಟ ಇದೆಯೆಂದು ಗೊತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ : ಪಂಚಾಯಿತಿ ಚುನಾವಣೆಯಾದಾಗ ತಮ್ಮದೇ ಸರ್ಕಾರ ಇತ್ತು. ಆಗ ಏನೇನು ಅಟ್ರಾಸಿಟೀಸ್ ಆಯಿತು ಎಂದು ಹೇಳಿದೆವು. ನಿಮ್ಮ ಕಾಲದಲ್ಲಿ ಏನೇನು ಆಯಿತು. ಅದು ನಮ್ಮ ಕಾಲದಲ್ಲೂ ಆಗಲಿ ಎಂದು ನಾನು ಹೇಳುವವನಲ್ಲ, ತಪ್ಪು ಮಾಡಿದ್ದರೆ, ತಪ್ಪು ಆಗಿದ್ದರೆ ಆಗಿದೆ. ಹಿಂದೆ. ಒಬ್ಬ ಹರಿಜನ ಮಹಿಳೆಗೆ, they stripped the entire cloth. ಅದೇ ಜಾಗದಲ್ಲಿ ಕುಳಿತುಕೊಂಡು ಹೇಳಿದ್ದೇನೆ. ಆಗ ನೀವು ಏನು ಕ್ರಮ ಕೈಗೊಂಡಿದ್ದೀರಿ? ನಿಮ್ಮ ಕಾಲದಲ್ಲಿ ಅದು ಆಯಿತು, ನಮ್ಮ ಕಾಲದಲ್ಲೂ ಆಗಲಿ ಎಂದು ಹೇಳುವುದಕ್ಕೆ ತಯಾರಿಲ್ಲ, ನಾವು ಈಗಾಗಲೇ ಹೇಳಿದ್ದೇವೆ. ಅಂದರೆ, ಏನಾದರೂ ತಪ್ಪು ಮಾಡಿದ್ದರೆ, ಅವರು ನಮ್ಮ ಪಕ್ಷದವರೇ ಆಗಲಿ ಪನಿಷ್ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವ ದಿವಸ ಲೀಡರ್ ಚುನಾವಣೆ ನಡೆಯಿತು. ಬೇಕಾದರೆ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸದನದ ಮುಂದೆ ಇಡಿ. ಯಾರು ಯಾರು ಕಾರಣಕರ್ತರು, ಯಾವ ರೀತಿ ಆಯಿತು ಎಂಬುದು ಗೊತ್ತಾಗಲಿ. ನಿಮ್ಮ ಪಕ್ಷದವರು ಮಾಡಿದ್ದಾರೋ, ಅಥವಾ ಹೊರಗಿನವರು ಮಾಡಿದ್ದಾರೋ ಗೊತ್ತಾಗಲಿ. ನೀವು ಹೇಳಿದಹಾಗೆ ಗೂಂಡಾಗಳೇ ಮಾಡಿದ್ದರೆ, ನಿಮ್ಮ ಪಾರ್ಟಿಯವರೇ. ನಿಮ್ಮ ಪಾರ್ಟಿ ಆಫೀಸಿಗೆ ಅಥವಾ ಲೆಜಿಸ್ಲೇಟರ್ಸ್ ಪಾರ್ಟಿ ಕಡೆ ಅಂದರೆ ಜನತಾ ದಳದ ಪಾರ್ಟಿ ಕಡೆ ಬೇರೆಯವರು ಬರುವುದಕ್ಕೆ ಸಾಧ್ಯವಿಲ್ಲವೆಂದು ತಿಳಿದು ಕೊಂಡಿದ್ದೇನೆ. ಯಾವಾಗಲೂ ನಿಮ್ಮ ಪಕ್ಷದ ಸದಸ್ಯರು, ಸಿಂಫಥೈಸರ್ಸ್ ಇಂತಹವರೇ ಬರುತ್ತಾರೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಯಾರೋ ಹೊರಗಿನವರು ಬಂದರು ಎಂದು ಹೇಳುತ್ತಾರೆ. ಒಂದು ವೇಳೆ ಹೊರಗಿನವರು ಬಂದರೂ ಕೂಡ, ಬಹಿರಂಗವಾಗುತ್ತದೆ. ವಿಚಾರಣಾ ವರದಿಯನ್ನು ಸದನದ ಮುಂದೆ ಇಡಿ. ಯಾರು ತಪ್ಪಿತಸ್ಥರು, ಯಾರು ಮಾಡಿದರು, ಯಾರು ಕಾರಣಕರ್ತರು ಎಂದು ಜನರಿಗೆ ಗೊತ್ತಾಗುತ್ತದೆ. ಇಲ್ಲದೇ ಹೋದರೆ, ಏನು ಬರುತ್ತದೆಂದರೆ, ತಾವೂ ಕೂಡ ನೋಡಿರಬಹುದು. ಈ ವಿಷಯವಾಗಿ ಪತ್ರಿಕೆಗಳಲ್ಲೂ ಬಂದಿದೆ. ಯಾರೋ ಒಬ್ಬರು 50 ಸಾವಿರ ಜನರನ್ನು ತಂದು, ಒಬ್ಬರು ಮುಖ್ಯಮಂತ್ರಿಯಾಗಬಹುದು, 10 ಲಕ್ಷ ಜನರನ್ನು ಸೇರಿಸಿದರೆ, ಈ ದೇಶದ ಪ್ರಧಾನ ಮಂತ್ರಿಯಾಗಬಹುದು ಎನ್ನತಕ್ಕಂಥ ಮಾತನ್ನು ಅನೇಕ ಜನರು ಆಡುತ್ತಿದ್ದಾರೆ. ಅಂದರೆ ಕೆಲವು ಸಲ ಮಸಲ್ ಪವರ್ ಕೂಡ ಕೆಲಸಕ್ಕೆ ಬರುತ್ತದೆ ಎನ್ನತಕ್ಕಂಥ ಅಭಿಪ್ರಾಯ ಹೊರಗಡೆ ಕೂಡ ಬಂದಿದೆ.

SRI QUMARUL ISLAM : Sir, there was a rumour that a secret direction was given not to take action on those workers. Is it a fact? That is why the Police Commissioner has not taken action.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಮ್ಮ ಶಾಸಂಕಾಂಗ ಪಕ್ಷದ ನಾಯಕರಾದ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕಾರ ಮಾಡಿದಂಥ ಸಂದರ್ಭದಲ್ಲಿ ಆದಂಥ ಘಟನಾವಳಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಪೋಲೀಸ್ ಮಹಾನಿರ್ದೇಶಕರು ಅಂದರೆ, ಡಿ.ಜಿ.ಪಿ.ಯವರಿಗೆ ನಾವು 12ನೇ ತಾರೀಖು ಎಲ್ಲಾ ಘಟನಾವಳಿಗಳು, ಇವು ಯಾವ ಸಂದರ್ಭದಲ್ಲಿ ನಡೆಯಿತು, ಇದಕ್ಕೆ ಯಾರು ಕಾರಣಕರ್ತರು ಎನ್ನುವುದರ ಬಗ್ಗೆ ಸವಿಸ್ತಾರವಾಗಿ ವಿಚಾರಣೆ ಮಾಡಿ, ಸರ್ಕಾರಕ್ಕೆ ತಿಳಿಸಬೇಕೆಂದು, ಮಾನ್ಯ ಮುಖ್ಯಮಂತ್ರಿಗಳಾದ ದೇವೇಗೌಡರು ನಿರ್ದೇಶನ ಮಾಡಿದ್ದಾರೆ. ವರದಿ ಇನ್ನೂ

ಸರ್ಕಾರಕ್ಕೆ ಬಂದಿಲ್ಲ; ಬರತಕ್ಕಂಥ ಹಂತದಲ್ಲಿದೆ. ನಾನು ತಮ್ಮ ಮೂಲಕ ಮಾನ್ಯ ಖರ್ಗೆಯವರಿಗೆ ಮತ್ತು ಇತರೇ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಭರವಸೆ ಕೊಡುತ್ತೇನೆ. ಯಾರೇ ತಪ್ಪಿತಸ್ಥರಿದ್ದರೂ, ಅವರು ಎಷ್ಟೇ ದೊಡ್ಡ ವ್ಯಕ್ತಿಗಳಾಗಿದ್ದರೂ ಸಹಿತ, ಆ ವರದಿಯ ಆಧಾರದ ಮೇಲೆ, ಕಾನೂನು ಪ್ರಕಾರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಬಾಕಿ ಘಟನಾವಳಿಗಳೇನಿವೆ; ಅದು ಮಧುಗಿರಿಯಲ್ಲಿ ಇರಬಹುದು; ರಾಮನಗರದಲ್ಲಿ ಇರಬಹುದು, ಕನಕಪುರದಲ್ಲಿ ಇರಬಹುದು, ಅಥವಾ ಮತ್ತೊಂದು ಕಡೆ ಇರಬಹುದು. ನಾನು ಎಲ್ಲವನ್ನೂ ಸಹಿತ ಬರೆದುಕೊಳ್ಳುತ್ತೇ. ತಾವು ಹೇಳಿದಂಥ ಎಲ್ಲ ಘಟನಾವಳಿಗಳನ್ನೂ ನಾನು ಕೇಳುತ್ತೇನೆ. ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ , ನಾನೂ ಕೂಡ ಚರ್ಚೆಯಲ್ಲಿ ಭಾಗವಹಿಸಿ, ಗೃಹ ಇಲಾಖೆಗೆ ಸಂಬಂಧಪಟ್ಟ ಹಾಗೆ ಸಮಂಜಸವಾದ ಅಂಕಿಅಂಶಗಳನ್ನು ಕೊಡುವುದರ ಮೂಲಕವಾಗಿ ಉತ್ತರವನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ನಮ್ಮ ಕಮರುಲ್ ಇಸ್ಲಾಂರವರು ಏನು ಹೇಳಿದ್ದಾರೆ, ಯಾರೋ ಸೂಚನೆಯನ್ನು ಕೊಟ್ಟಿದ್ದರು ಎಂದು. ತಮಗೆ ನಿಯಮಾವಳಿಗಳು ಬಹಳ ಚೆನ್ನಾಗಿ ಗೊತ್ತಿದೆ. ಸಂವಿಧಾನ ಗೊತ್ತಿದೆ, ಎಲ್ಲಾ ವಿಚಾರಗಳೂ ಗೊತ್ತಿರತಕ್ಕಂಥವರು. ಏಕೆಂದರೆ, ಶಾಸನ ಸಭೆಗೆ ಮೂರು ಸಾರಿ ಆಯ್ಕೆಯಾಗಿ ಬಂದಿದ್ದೀರಿ. ಅವತ್ತು ಸಂಜೆ 6-10 ನಿಮಿಷದವರೆಗೆ, ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿರಲಿಲ್ಲ, ಆವತ್ತು ಯಾರು ಮುಖ್ಯಮಂತ್ರಿಗಳಾಗಿದ್ದರು, ಅವರು ರಾಜೀನಾಮೆ ಕೊಟ್ಟಿದ್ದರು. ಆದರೂ ಅವರೇ ತಾತ್ಕಾಲಿಕವಾಗಿ ಮುಖ್ಯಮಂತ್ರಿಗಳಾಗಿ ಮುಂದುವರಿಯಬೇಕೆಂದು ರಾಜ್ಯಪಾಲರು ಅವರಿಗೆ ಸೂಚನೆಯನ್ನು ಕೊಟ್ಟಿದ್ದರು. ಆದ್ದರಿಂದ, ಪೋಲೀಸಿನವರಾಗಲೀ ಅಥವಾ ಪೋಲೀಸ್ ಮಹಾನಿರ್ದೇಶಕರಾಗಲೀ ಅಥವಾ ಬೆಂಗಳೂರು ನಗರಸಭೆಯ ಪೋಲೀಸ್ ಆಯುಕ್ತರಾಗಲೀ ನಮ್ಮ ಮಾತನ್ನು ಕೇಳತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ನಾವು ಸೂಚನೆ ಕೊಟ್ಟರೂ ಸಹಿತ, ಕೇಳತಕ್ಕಂಥವರು ಯಾರು ಇರುತ್ತಾರೆ? ಆದ್ದರಿಂದ, ಈ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ತಮ್ಮ ಮೂಲಕ ಮತ್ತೊಮ್ಮೆ ಮಾನ್ಯ ಸದಸ್ಯರಿಗೆ ಪರಂಭರಿಸುತ್ತೇನೆ.

1.15 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಿಂಧ್ಯಾ ಅವರು ಮಾತನಾಡಿದ್ದಾರೆ, ನಾವು ಗಂಭೀರವಾಗಿ ಕುಳಿತು ಕೇಳಿದ್ದೇವೆ. ಎಷ್ಟು ಸುಲಭವಾಗಿ, ಸುಂದರವಾಗಿ ಹೇಳಿ ಅವರೆಲ್ಲ ನಮ್ಮ ಮಾತು ಕೇಳಿದರು ಎಂದು ಹೇಳಿದರು. ಮುಂದೆ ಯಾವ ಸರ್ಕಾರ ಬರುತ್ತದೆ ಎಂದ ತಕ್ಷಣ ಅಧಿಕಾರಿಗಳು ಕಚ್ಚೆ ಹಿಡಿದುಕೊಂಡು ಓಡುತ್ತಾರೆ. ಇದು ಸತ್ಯಕ್ಕೆ ದೂರವಾದ ಮಾತು. ಅವರು ನಮ್ಮ ಮಾತು ಕೇಳುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದು ಹೇಳುತ್ತಾರೆಲ್ಲ ಆ ಮಾತು ಒಪ್ಪುವುದಿಲ್ಲ ವಿಚಾರ ಏನಾದರೂ ಆಗಲಿ.

ಶ್ರೀ ಪಿ.ಜಿ. ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಅಷ್ಟೊಂದು ನಿಸ್ಸಾಹಯಕತೆಯನ್ನು ವ್ಯಕ್ತಪಡಿಸುವುದಕ್ಕೆ ನಾನು ತಯಾರಾಗಿಲ್ಲ, ನಾನು ಸೌಜನ್ಯದಿಂದ ನಗು ನಗುತ್ತಾ ಹೇಳಿದ್ದೇನೆ. ಅಂದರೆ, ಇವರಿಗೆ ದಮ್ಮೇ ಇಲ್ಲ ಶಕ್ತಿ ಇಲ್ಲ ಇವರ ಮಾತೇ ಕೇಳುತ್ತಿಲ್ಲ ಎನ್ನತಕ್ಕಂಥ ಭಾವನೆ ಯಾರಿಗೂ ಬರುವುದು ಬೇಡ. ಅಧಿಕಾರಿಗಳು ನಮ್ಮ ಮಾತು ಕೇಳುತ್ತಾರೆ ಯಾವಾಗ ಕೇಳುತ್ತಾರೆ? ಅಧಿಕಾರಕ್ಕೆ ಬಂದ ಮೇಲೆ, ಅಧಿಕಾರಕ್ಕೆ ಬಾರದೇ ನಾವು ಹೇಗೆ ನಿರ್ದೇಶನವನ್ನು ಕೊಡಲಿಕ್ಕೆ ಆಗುತ್ತದೆ? ತಾವು ಮುಖ್ಯಮಂತ್ರಿಗಳು ಆಗಲಿಕ್ಕೆ ಮುಂಚೆಯೇ ಮಂತ್ರಿ ಆಗುವುದಕ್ಕಿಂತ ಮುಂಚೆಯೇ ಸೂಚನೆಯನ್ನು ಕೊಟ್ಟಿದ್ದೀರಾ ಅಂದ್ರರೆ ಸೂಚನೆಯನ್ನು ಯಾರು ತೆಗೆದುಕೊಳ್ಳುವುದಕ್ಕೆ ತಯಾರು ಇರುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾವೇ ಆ ದಿವಸ ಅಧಿಕಾರದಲ್ಲಿ ಇದ್ದೆವು. ಅದಕ್ಕೆ ನಮ್ಮ ಮಾತು ಕೇಳಲಿಲ್ಲ ಎಂದು ನಿಮ್ಮ ವಾದ ಇದ್ದರೆ, ನೀವು ಇನ್ನೂ ಅಧಿಕಾರ ತೆಗೆದುಕೊಂಡಿಲ್ಲ. ಆದ್ದರಿಂದ ಹೇಳಿದ್ದನ್ನು ನೀವು ಕೇಳಲಿಲ್ಲ. ಅಂದರೆ, ಒಂದು ನ್ಯಾಯಾಂಗ ತನಿಖೆಯನ್ನು ಬೇಕಾದರೆ ಮಾಡಿಸೋಣ ಯಾರಾದರೂ ಒಬ್ಬ ಜಡ್ಜ್‌ಗೆ ಅಪಾಯಿಂಟ್ ಮಾಡಿಸಿ ಇಂಪಾರ್ಷಿಯಲ್ ಆಗಿ ಈ ಘಟನೆಗಳು ಹೇಗೆ ನಡೆಯಿತು ಇದಕ್ಕೆ ಯಾರು ಕಾರಣಕರ್ತರು ಎನ್ನುವುದು ನಮಗೆ ಗೊತ್ತಾಗುತ್ತದೆ. ನಾವು ಏನಾದರೂ ತಪ್ಪಿತಸ್ಥರು ಇದ್ದರೆ ನಮಗೂ ಶಿಕ್ಷೆ ಆಗಲಿ. ಅವರ ಜನರು ಯಾರಾದರೂ ಮಾಡಿದ್ದರೆ ಅವರಿಗೆ ಶಿಕ್ಷೆ ಆಗಲಿ. ಅದಕ್ಕಾಗಿ ದಯವಿಟ್ಟು ಇದನ್ನು ಏಕೆ ಮಾಡಿಸುವುದಕ್ಕೆ ಹೋಗುತ್ತೀರಿ. ನಿಮ್ಮ ಜನರೇ ಓಪನ್ ಆಗಿ ಹೇಳುವಾಗ ಏನೋ ತಪ್ಪಾಗಿದೆ ಎಂದು ಒಪ್ಪಿಕೊಳ್ಳಿ. ಆದರೆ ಮುಂದೆ ಇಂತಹ ಘಟನೆಗಳು ಆಗದೆ ಇರುವ ಹಾಗೆ ನೋಡಿಕೊಳ್ಳಿ. ನಾವು 5 ವರ್ಷ ಒಳ್ಳೆಯ ಸರ್ಕಾರವನ್ನು ಕೊಡುತ್ತೇವೆ ಒಗ್ಗಟ್ಟಾಗ ಇರುತ್ತೇವೆಂದು ಜನರಿಗೆ ಹೇಳಿಕೊಂಡು ಬಂದಿದ್ದೀರಿ. ಇದಕ್ಕೆ ಪ್ರಾರಂಭದಿಂದಲೇ ಶುರುವಾಗಿದೆ. ನಮ್ಮ ಕಡೆ ಒಂದು ಗಾದೆ ಮಾತು ಹೇಳುತ್ತಾರೆ ಕೂಸಿನ ಗುಣ ಹೇಗೆ ಗೊತ್ತಾಗುತ್ತದೆ ಅಂದ್ರೆ ತೊಟ್ಟಿಲಿನಲ್ಲಿ ಇದ್ದಾಗಲೇ ಗೊತ್ತಾಗುತ್ತದೆ ಎಂದು.

ಈಗ ಪ್ರಾರಂಭದಲ್ಲೇ ಇದು ಶುರು ಆದ ಮೇಲೆ ಜನರಿಗೆ ಇದೆಲ್ಲಾ ಗೊತ್ತಾಗಿದೆ. ದಯವಿಟ್ಟು ಆ ಒಂದು ಭಾವನೆಯನ್ನು ಜನರಲ್ಲಿ ಮೂಡಿಸಬೇಡಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕೆ ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ಒಪ್ಪಿಕೊಳ್ಳುತ್ತಾರೆ ಎಂದು ಕಾಣುತ್ತದೆ, ಅಫೀಸರ್ ಎನ್‌ಕೌಂಟರ್ ಆದರೆ ಪಾರ್ಷಿಯಾ ಬರಬಹುದು. ಆ ಒಂದು ಘಟನೆ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಿಸಿಬಿಡಿ. ಅದು ಒಳ್ಳೆಯದಾಗುತ್ತದೆ. ಇದನ್ನು ನಾನು ಏತಕ್ಕೆ ಹೇಳುತ್ತೇನೆಂದರೆ ಈ ರೀತಿಯಾಗಿ ಪ್ರಜಾಪ್ರಭುತ್ವದಲ್ಲಿ ನಡೆಯಬಾರದು. ಪ್ರಜಾಪ್ರಭುತ್ವದಲ್ಲಿ ನೀವೆಲ್ಲರೂ ಅನುಭವಿಗಳು ಅನೇಕ ಜನ ಈ ಕಡೆ ಕುಳಿತಂತಹ ಸದಸ್ಯರಿಗಿಂತಲೂ ಹೆಚ್ಚು ಅನುಭವವನ್ನು ಪಡೆದಂತಹ ಜನ ಅಲ್ಲಿ ಇದ್ದಾರೆ. ನೀವು ಮಾಡಿದಂತಹ ಚುನಾವಣೆಗಳು ನೀವು ನಡೆದುಕೊಳ್ಳುವಂತಹ ನಡವಳಿಕೆಗಳು ಬೇರೆಯವರಿಗೆ ಆದರ್ಶವಾಗಿ ಇರಬೇಕೇ ಹೊರತಾಗಿ ಅವರ ಕಾಲದಲ್ಲಿ ಈ ರೀತಿ ಆಯಿತು ಅಂತ ಹೇಳಿಕೊಳ್ಳುವಂತಹ ರೀತಿಯಲ್ಲಿ ಇರಬಾರದು. ಪ್ರಜಾಪ್ರಭುತ್ವದಲ್ಲಿ ನೀವೆಲ್ಲರೂ ಅನುಭವಿಗಳು ಅನೇಕ ಜನ ಈ ಕಡೆ ಕುಳಿತಂತಹ ಸದಸ್ಯರಿಗಿಂತಲೂ ಹೆಚ್ಚು ಅನುಭವವನ್ನು ಪಡೆದಂತಹ ಜನ ಅಲ್ಲಿ ಇದ್ದಾರೆ. ನೀವು ಮಾಡಿದಂತಹ ಚುನಾವಣೆಗಳು ನೀವು ಮಾಡಿದಂತಹ ಚುನಾವಣೆಗಳು ನೀವು ನಡೆದುಕೊಳ್ಳುವಂತಹ ನಡವಳಿಕೆಗಳು ಬೇರೆಯವರಿಗೆ ಆದರ್ಶವಾಗಿ ಇರಬೇಕೇ ಹೊರತಾಗಿ ಅವರ ಕಾಲದಲ್ಲಿ ಈ ರೀತಿ ಆಯಿತು ಅಂತ ಹೇಳಿಕೊಳ್ಳುವಂತಹ ರೀತಿಯಲ್ಲಿ ಇರಬಾರದು. ಅದನ್ನು ನೀವು ಸ್ವಲ್ಪ ಗಮನದಲ್ಲಿ ಇಟ್ಟುಕೊಳ್ಳಿ. ಪ್ರತಿಯೊಂದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಪ್ರತಿಯೊಂದು ಕೂಡ ನಾವು ಮಾಡಿದ್ದೇ ಸರಿ ಎಂದು ಹೇಳಿಕೊಳ್ಳುವುದಕ್ಕೆ ಹೋಗಬೇಡಿ. ನೀವು ಅಧಿಕಾರಕ್ಕೆ ಬಂದ ಮೇಲೆ ಕೇವಲ ಈ 15 ದಿವಸದಲ್ಲಿ ಬಹಳಷ್ಟು ಕಡೆ ಈ ಒಂದು ಕಾರ್ಯಕರ್ತರುಗಳ ಕೊಲೆ ಲೂಟಿಗಳು ನಡೆದಿವೆ. ಈಗಾಗಲೇ ನಾವು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಪುನಃ ನಾನು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇದರಿಂದ ಏನು ತೋರಿಸುತ್ತಿದೆ ಅಂದರೆ ಈ ಸರ್ಕಾರಕ್ಕೆ ಲಕ್ಷಣಗಳು ಸರಿ ಇಲ್ಲ ಎನ್ನುವುದನ್ನು ತೋರಿಸುತ್ತದೆ. ಯಾವುದೇ ರೀತಿಯಿಂದ ನೋಡಿದರೂ ಕೂಡ ಲಾ ಅಂಡ್ ಆರ್ಡರ್ ಪರಿಸ್ಥಿತಿ ನೋಡಿದರೆ. ಈ ರೀತಿ ಇದೆ. ತಮ್ಮ ಕಾರ್ಯಕರ್ತರು ಬೇರೆ ಕಾರ್ಯಕರ್ತ ಮೇಲೆ ಅನ್ಯಾಯ ದಬ್ಬಾಳಿಕೆ ಮಾಡತಕ್ಕಂಥಾದ್ದು ಇದೆಲ್ಲಾ ನಡೆದಿದೆ ಮತ್ತು ಇನ್ನೊಂದು ತಾವು ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀರಿ

ಅಂದರೆ, ರೈತರ ಸಾಲದ ಮೇಲಿನ ಬಡ್ಡಿಯನ್ನು ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಯಾರು 31ನೇ ಮಾರ್ಚಿ ಒಳಗೆ ಕೊಡುತ್ತಾರೆ ಅವರಿಗೆ. ಇದು ಜಾಲಪ್ಪನವರಿಗೂ ಕೂಡ ಚೆನ್ನಾಗಿ ಗೊತ್ತಿದೆ. ಎಷ್ಟು ಜನರಿಗೆ ಇದು ಪ್ರಯೋಜನ ಆಗುತ್ತದೆ? ಈ ಅವಧಿಯಲ್ಲಿ ಎಷ್ಟು ಜನ ರೈತರು ಈ ರಾಜ್ಯದಲ್ಲಿ ಹಣ ಕಟ್ಟಬಹುದು? ಏಕೆಂದರೆ ಅನೇಕ ಸಾರಿ ನಾವು ಕೂಡ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದರೆ 3-4 ತಿಂಗಳ ಅವಧಿಯಲ್ಲಿ ಯಾರೂ ಬರುವುದಿಲ್ಲ. ಯಾರು ಬರುತ್ತಾರೆ ಅಂದ್ರರೆ ಯಾರ ಹತ್ತಿರ ಸ್ವಲ್ಪ ಹಣ ಇರುತ್ತದೆ, ಶ್ರೀಮಂತರಾಗಿರುತ್ತಾರೆ, ಅವರು ಬಂದು ಕಟ್ಟಿ ಅವರು ಇದರ ಲಾಭವನ್ನು ಪಡೆದುಕೊಂಡು ಹೋಗುತ್ತಾರೆ. ಉಳಿದಂತಹ ರೈತರಿಗೆ ಎಲ್ಲಿ ಲಾಭ ಆಗುತ್ತದೆ. ಸುಮಾರು ಈ ರಾಜ್ಯದಲ್ಲಿ 63 ಲಕ್ಷ ಪಟ್ಟಾದಾರರು ಇದ್ದಾರೆ.

63 ಅಥವಾ ಈಗ 70 ಲಕ್ಷ ಆಗಿರಬಹುದು. ಅಷ್ಟು ಜನ ರೈತರಿಗೆ ಇದರ ಲಾಭ ಆಗುವುದಕ್ಕೆ ಸಾಧ್ಯ ಇದೆಯೇ? ಈಗ 67-70 ಲಕ್ಷ ಜನ ರೈತರು ಅಂತ ತಿಳಿದುಕೊಳ್ಳಿ. ಇದರಲ್ಲಿ ಇಲ್ಲಿಯವರೆಗೂ ಕೋ ಆಪರೇಟೀವ್ ಸಾಲವನ್ನು ಪಡೆದುಕೊಳ್ಳತಕ್ಕಂಥ ಜನ ಎಷ್ಟು ಜನ ಇದ್ದಾರೆ. ಅಂದರೆ ಕಳೆದ 60 ವರ್ಷದ ಲೆಕ್ಕ ತೆಗೆದು ಕೊಂಡರೂ ಕೂಡ 10-11 ಲಕ್ಷಕ್ಕೆ ಮೀರಿಲ್ಲ. ಇನ್ನು ಉಳಿದ 45 ಲಕ್ಷಕ್ಕೆ ಎಲ್ಲಿ ಲಾಭ ಆಗುತ್ತದೆ? 60-70 ಲಕ್ಷ ಜನರಲ್ಲಿ ಸಾಲ ಪಡೆದುಕೊಂಡತಹವರು ನಿಮ್ಮ ಅಪೆಕ್ಸ್ ಬ್ಯಾಂಕ್‌ನಿಂದ ಕೋ ಆಪರೇಟಿವ್ ಬ್ಯಾಂಕ್‌ನಿಂದ ಕೇವಲ 10 ರಿಂದ 12 ಲಕ್ಷ ಮಾತ್ರ. ಅದರಲ್ಲಿಯೂ ಕೂಡ ಪ್ರತಿ ವರ್ಷ ಸಾಲ ತೆಗೆದುಕೊಳ್ಳತಕ್ಕಂಥವರು 1-2 ಲಕ್ಷ ಮಾತ್ರ. ನೀವು ಬಡ್ಡಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದರೂ ಕೂಡ ಎಷ್ಟು ಜನರಿಗೆ ಲಾಭ ಆಗುತ್ತದೆಯ ಕೊನೆಗೆ 50 ಸಾವಿರವೋ ಒಂದು ಲಕ್ಷವೋ ಆಗುತ್ತದೆ. ಯಾರಿಗೆ ಸಿಗುತ್ತದೆ? ಅದಕ್ಕಾಗಿ ಇವತ್ತು ಬಡ್ಡಿ ಮತ್ತು ಸುಸ್ತಿ ಬಡ್ಡಿ ಎರಡನ್ನು ಕೂಡ ಮಾಫಿ ಮಾಡುತ್ತೇವೆಂದರೆ 3 ತಿಂಗಳಲ್ಲಿ ಒಂದು ವರ್ಷಕ್ಕೆ 5 ಕೋಟಿ ಬೇಕಾಗುತ್ತದೆ. ಅದು ನಿಜವಾಗಿಯೂ ಲಾಭ ಆಗುತ್ತದೆ. ಆ ಲಾಭವನ್ನು ಪಡೆದುಕೊಂಡು ಬೇಕಾದರೆ ಹಣವನ್ನು ಪಾವತಿ ಮಾಡುತ್ತಾರೆ. 3 ತಿಂಗಳು ಅಂದರೆ ಇದ್ದವರು ಮಾತ್ರ ಕೊಡುತ್ತಾರೆ. ಕೊಡದೇ ಇರುವವರಿಗೆ ಇದು ಲಾಭವೇ ಆಗುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನೀವು ಅಧಿಕಾರದಲ್ಲಿದ್ದಾಗ, ನಾವು ಅಲ್ಲಿ ಕುಳಿತುಕೊಂಡು ಬಡ್ಡಿ ಮನ್ನಾ ಮಾಡಿ ಎಂದು 5 ವರ್ಷಗಳಿಂದ ಕೇಳಿಕೊಂಡೆವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಕವರಿ ಮಾಡುವುದಕ್ಕೆ ನಾವು ನಿಮಗೆ ಸ್ಪಷ್ಟವಾಗಿ ಹೇಳಿದ್ದೆವು. ನಾನು ಆ ಸ್ಥಾನದಲ್ಲಿ ನಿಂತೆ ಹೇಳಿದ್ದೆ. ರಿಕವರಿ ನಿಲ್ಲಿಸುವುದಿಲ್ಲ ಎಂದು. ನಾನು ರಿಕವರಿ ಚೆನ್ನಾಗಿ ಮಾಡಿಸಿಕೊಟ್ಟಿದ್ದೇನೆ ನನ್ನ ಅವಧಿಯಲ್ಲಿ ಅದು 6 ತಿಂಗಳು ಇರಲಿ 5 ತಿಂಗಳು ಇರಲಿ. ಒತ್ತಾಯಪೂರ್ವಕವಾಗಿ ರಿಕವರಿ ಮಾಡಿ ಅನೇಕ ಬ್ಯಾಂಕ್‌ಗಳು ಜೀವಂತವಾಗಿ ಕೆಲಸ ಮಾಡುವಂತೆ ಮಾಡಿಸಿದ್ದೇನೆ. ಸತ್ತು ಹೋದಂತಹ ರಾಯಚೂರು ಬ್ಯಾಂಕ್‌ಗೆ ಜೀವ ತುಂಬತಕ್ಕಂಥ ಕೆಲಸ ಮಾಡಿದ್ದೇನೆ. ಸುಮ್ಮನೆ ಹೇಳಬೇಡಿ ಬೇರೆಯವರಿಗೆ ಹೇಳಿದಂತೆ. ಅದಕ್ಕೆ ನಾನು ಇದನ್ನು ಸ್ಪಷ್ಟವಾಗಿ ಹೇಳಿದೆ.

ಶ್ರೀ ಸಿದ್ದರಾಮಯ್ಯ (ಹಣಕಾಸಿನ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಬಡ್ಡಿ ಮನ್ನಾ ಮಾಡಿ ಬ್ಯಾಂಕ್‌ಗಳನ್ನು ಸುರಕ್ಷಿತವಾಗಿ ಇಟ್ಟಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಬಡ್ಡಿ ಮನ್ನಾ ಮಾಡಿಲ್ಲ ಯಾವುದೂ ಮಾಡಿಲ್ಲ 5 ವರ್ಷಗಳಲ್ಲಿ ಎಷ್ಟು ಒತ್ತಾಯ ಮಾಡಿದರೂ ಒಂದು ಪೈಸೆ ಮಾಡಿಲ್ಲ. ಈಗ ರಿಕವರಿ ಮಾಡಿಸಿದ್ದೇನೆಂದು ಹೇಳುತ್ತಿದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ : ತಮ್ಮ ಕಾಲದಲ್ಲಿ ಒಂದೇ ಒಂದು ಇಂಪ್ಲಿಮೆಂಟ್ ಆಯಿತು. ಪ್ರೈಮರಿ ಸೊಸೈಟಿಗಳಿಗೆಲ್ಲಾ ನಾಮಿನೇಷನ್ಸ್ ಮಾಡಿದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವೇನು ಬಿಟ್ಟಿದ್ದೀರಿ ಸುಮ್ಮನೆ ಇರಿ. ನಿಮ್ಮ ಸರ್ಕಾರದಿಂದ ಪ್ರಾರಂಭ ಆಗಿದ್ದು ಅದನ್ನು ನಾವು ಮುಂದುವರಿಸಿದ್ದುದು. ನಾಮಿನೇಷನ್ ಮಾಡಿಕೊಂಡು ಅಪೆಕ್ಸ್‌ಬ್ಯಾಂಕ್ ಅಧ್ಯಕ್ಷರಾಗಿದ್ದನ್ನು ನಾನು ತೋರಿಸಲೆ?

ಶ್ರೀ ಆರ್.ಎಲ್. ಜಾಲಪ್ಪ : ಇಡೀ ಇಂಡಿಯಾದಲ್ಲಿ ಎಲ್ಲೂ ಮಾಡಿಲ್ಲ ಅದನ್ನು ನೀವು ಮಾಡಿದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ನಾನು ಹೇಳಬೇಕಾಗುತ್ತದೆ. ಎಲ್ಲಾ ಕೋ-ಆಪರೇಟರ್ಸ್‌ನ್ನು ಸೇರಿಕೊಂಡು ಮಾಡಿಕೊಂಡರಿ ಎಂದು ಆ ದಿನ ಕೆ.ಎಚ್. ಪಾಟೀಲರಿಗೆ ನೀವೇ ಹೇಳಿದಿರಿ. ಅದಕ್ಕೆ ಅವರು ಏನು ಉತ್ತರ ಕೊಟ್ಟರು ನಿಮಗೆ. ಹೌದಪ್ಪ ಹಿಂದೆ ನೀವು ಮಾಡಿದಿರಿ; ಅದಕ್ಕೆ ನಾವು ಮಾಡಿದೆವು ಅಂತ.

ಶ್ರೀ ಆರ್.ಎಲ್. ಜಾಲಪ್ಪ : ಇದನ್ನು ಮಾಡಬಾರದಾಗಿತ್ತು. ಬೇರೆಯವರಿಗೆ ಕೊಡಿ. ನೀವು ರಾಜೀನಾಮೆ ಕೊಡಿ ಎಂದು ಅವರಿಗೆ ಹೇಳಿದ್ದವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಅದೆಲ್ಲಾ ಬೇಡ, ನೀವು ಏನು ಮಾಡುತ್ತೀರಿ ಮಾಡಿಕೊಂಡು ಹೋಗಿ. ನಾವು ಆದಷ್ಟು ಪ್ರಯತ್ನ ಮಾಡಿದ್ದೇವೆ. ನಿಜವಾಗಿಯೂ ಲಾಭ ಆಗಬೇಕು. ಸಾಕಷ್ಟು ಸಮಯ ಕೊಡಿ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಬಡ್ಡಿ ಮನ್ನಾ ಸುಸ್ತಿ ಬಡ್ಡಿ ಮನ್ನಾ ಮಾಡಿರುವುದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. 5 ವರ್ಷಗಳ ಕಾಲ ನಾವು ಆ ಕಡೆ ಕುಳಿತು ಸ್ವಾಮಿ ನಿಮ್ಮ ಮುಖ್ಯಮಂತ್ರಿಗಳ ಕಾಲು ಒಂದನ್ನು ಮಾತ್ರ ಮುಟ್ಟಿಲ್ಲ ಮಿಕ್ಕಿದ್ದು ಎಲ್ಲಾ ರೀತಿಯಲ್ಲೂ ನಾವು ಮಾಡಿದ್ದೇವೆ. ಬಡ್ಡಿ ಮತ್ತು ಸುಸ್ತಿ ಬಡ್ಡಿ ವಜಾ ಮಾಡಿ ಎಂದು ಬೇಡಿದೆವು. ವಿರೋಧಪಕ್ಷದಲ್ಲಿರತಕ್ಕಂಥವರು ಎಲ್ಲರೂ ಸಹ. ಆದರೆ ನೀವು ಯಾರ ಸಾಲ ವಜಾ ಮಾಡುವುದಕ್ಕೆ ಮುಂದಾದಿರಿ ಅಂದರೆ ಎಕ್ಸೈಜ್ ಕಂಟ್ರಾಕ್ಟರ್ಸ್ ಬಡ್ಡಿಯನ್ನು ವಜಾ ಮಾಡುವುದಕ್ಕೆ ಮುಂದಾದಿರಿ. ಆದರೆ ರೈತರ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಲು ತಾವು ಮುಂದಾಗಲಿಲ್ಲ. ಇದನ್ನು ದಯಮಾಡಿ ಜ್ಞಾಪಕದಲ್ಲಿಟ್ಟುಕೊಂಡು ಮಾತನಾಡಿ. ನೀವು ಮಾತನಾಡಿದ್ದಕ್ಕೆ ಏನಾದರೂ ಅರ್ಥ ಬರಬೇಕಾಗಿದ್ದರೆ, ನೀವು ಈ ಕಡೆಯಲ್ಲಿ ಕುಳಿತಂಥ ಸಂದರ್ಭದಲ್ಲಿ ಏನೇನು ಮಾತನಾಡಿದ್ದೀರಿ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡು ಮಾತನಾಡಿದರೆ ಅದಕ್ಕೆ ಅರ್ಥ ಬರುತ್ತದೆ. ಅದಿಲ್ಲದೆ, ಹೀಗೆ ಮಾತನಾಡಲು ತಮಗೆ ನೈತಿಕವಾದ ಬಲವಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಮಾತನಾಡಿದ್ದನ್ನು ತಾವು ಏನು ತಿಳಿದುಕೊಂಡಿದ್ದೀರೋ ಗೊತ್ತಿಲ್ಲ, ನಾನು ಹೇಳಿದ್ದುದೇನೆಂದರೆ ನೀವು ಬರಿ ಮೂರು ತಿಂಗಳಿಗೆ ಕೊಟ್ಟರೆ ಅದರಿಂದ ಅವರಿಗೆ ಏನೂ ಲಾಭವಾಗುವುದಿಲ್ಲ, 63 ಲಕ್ಷ ರೈತರುಗಳ ಪೈಕಿ ಕೇವಲ 10 ಲಕ್ಷ ರೈತರುಗಳು ಮಾತ್ರ ಇವ್ವೊತ್ತು ಬ್ಯಾಂಕ್‌ನಿಂದ ಸಾಲವನ್ನು ಪಡೆದುಕೊಂಡಿದ್ದಾರೆ, ಅವರ್ಯಾರಿಗೂ ಇದರಿಂದ ಲಾಭವಾಗುವುದಿಲ್ಲವಾದ ಕಾರಣ ಇದಕ್ಕೆ ಸಮಯವನ್ನು ವಿಸ್ತಾರ ಮಾಡಿ ಎಂದು ನಾನು ಕೇಳಿದರೆ, ನೀವೇನು ಮಾಡಿದ್ದೀರಿ ಎಂದು ಕೇಳಿದರೆ ನಾನೇನು ಹೇಳಬೇಕು? ನಾವು ಕೂಡ ಫೀನಲ್ ಇಂಟ್ರಿಸ್ಟ್‌ನ್ನು ವಜಾ ಮಾಡಿದ್ದೆವು. ಜಾಸ್ತಿ ಜನರು ಬರಲಿಲ್ಲ, ಅದರಿಂದ ಪ್ರಯೋಜನವಾಗಲಿಲ್ಲ, ಅದಕ್ಕಾಗಿ ನೀವೂ ಕೂಡ ಸಮಯ ಹೆಚ್ಚಿಗೆ ಮಾಡಿ ಎಂದು ನಾವು ಕೇಳುವಾಗ ನೀವು ಈ ರೀತಿಯಲ್ಲಿ ಹೇಳುವುದು ಸರಿಯಲ್ಲ. ಹೆಚ್ಚಿಗೆ ಮಾಡಿ

ಎಂದು ನಾವು ಕೇಳುವಾಗ ನೀವು ಈ ರೀತಿಯಲ್ಲಿ ಹೇಳುವುದು ಸರಿಯಲ್ಲ. ಸುಮಾರು ಇದದು 300 ಕೋಟಿಗಳಿಗೆ ಹೆಚ್ಚು ಕಡಿಮೆಯಾಗಬಹುದು. ನೀವು ಅದಕ್ಕೆ ಏನು ಪ್ರಾವಿಜನ್ ಮಾಡಿದ್ದೀರಿ? ಯಾವ ರೀತಿಯಾಗಿ ನೀವು ಸಹಾಯವನ್ನು ಮಾಡುತ್ತಾ ಇದ್ದೀರಿ? ಈ ಕೊ-ಆಪರೇಟಿವ್ ಸೊಸೈಟಿಗಳಿಗೆ ಯಾವ ಬ್ಯಾಂಕ್‌ನಿಂದ ಇವರು ಸಾಲವನ್ನು ಪಡೆದುಕೊಂಡಿದ್ದಾರೋ ಆ ಬ್ಯಾಂಕ್‌ಗಳಿಗೆ ನೀವು ಹಣವನ್ನು ಕೊಡಬೇಕು. ಇಲ್ಲವಾದರೆ ಈ ಬ್ಯಾಂಕ್‌ಗಳೆಲ್ಲವೂ ಮುಚ್ಚಿ ಹೋಗುತ್ತವೆ.

ಹೀಗೆ ನಾವು ಮಾಫಿ ಮಾಡಿದ್ದೇವೆಂದು ನೀವು ಇಲ್ಲಿ ಹೇಳಿಕೊಂಡರೆ ಆಗುವುದಿಲ್ಲ. ಏಕೆಂದರೆ ಮುಂದೆ ಆ ಬ್ಯಾಂಕ್‌ಗಳಿಗೆ ಬೇರೆ, ರೈತರುಗಳಿಗೆ ಸಾಲ ಕೊಡತಕ್ಕಂಥ ಶಕ್ತಿ ಬ್ಯಾಂಕ್‌ಗಳಿಗೆ ಬರಬೇಕೆಂದರೆ ಈ ಮುನ್ನೂರು ಕೋಟಿ ರೂಪಾಯಿಗಳನ್ನು ಎಲ್ಲಾ ಬ್ಯಾಂಕ್‌ಗಳಿಗೆ ಎಲ್ಲೆಲ್ಲಿ ಎಷ್ಟೆಷ್ಟು ಇವೊತ್ತಿನ ದಿವಸ ಎಕ್ಸ್‌ಮೆಷನ್ ಆಗುತ್ತದೆಯೋ, ಅಥವಾ ಬಿಡುಗಡೆಯಾಗುತ್ತದೆಯೋ ಅದನ್ನು ಆ ಬ್ಯಾಂಕ್‌ಗಳಿಗೆ ನೀವು ಭರಿಸಬೇಕಾಗುತ್ತದೆ. ಹೀಗೆ ನೀವು ಭರಿಸದೇ ಹೋದರೆ ಈ ಎಲ್ಲಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗಳು ಅಗ್ರಿಕಲ್ಚರ್ ಸೊಸೈಟಿಗಳು ಮತ್ತು ಬ್ಯಾಂಕ್‌ಗಳು ಮುಚ್ಚಿ ಹೋಗುತ್ತವೆ ಮತ್ತು ಮುಂದೆ. ರೈತರಿಗೆ ಸಾಲ ಸಿಗುವುದಿಲ್ಲ. ಹೀಗೆ ಅನೇಕ ಜನರು ಸಾಲವನ್ನು ಮಾಫಿ ಮಾಡಿ ಮಾಡಿ ಎಂದು ಹೇಳುತ್ತಾರಲ್ಲಾ ಹೀಗೆ ಒಂದು ಸಾರಿ ಮಾಫಿ ಮಾಡಿದಿರಿ ಅಂದರೆ ಯಾವ ರೀತಿಯಾಗಿ ಮುಂದಿನ ರೈತರಿಗೆ ಅದರಿಂದ ಅನಾನುಕೂಲವಾಗುತ್ತದೆ ಎಂಬ ಬಗ್ಗೆ ಯಾರೂ ಕೂಡ ಹೇಳುವುದಿಲ್ಲ. ಅದೇ ರೀತಿಯಾಗಿ ಇದೂ ಕೂಡ ಆಗುತ್ತದೆ. ಅದಕ್ಕಾಗಿ ನೀವು 300 ಕೋಟಿ ಹಣವನ್ನು ರೆಡಿ ಇಟ್ಟಿದ್ದೀರೋ? ಏಕೆಂದರೆ ಮುಂದಿನ ಜನವರಿಯಿಂದ ಮಾಡುತ್ತೇವೆ ಎಂದು ಹೇಳಿದ್ದೀರಿ. ಅಂದಾಗ ಎಲ್ಲಾ ಬ್ಯಾಂಕ್‌ಗಳಿಗೆ ಇಷ್ಟು ಹಣವನ್ನು ನೀವು ತಯಾರು ಮಾಡಿಕೊಂಡು ಕಳುಹಿಸಬೇಕಾಗುತ್ತದೆ.

ಅದು ಹತ್ತು ಲಕ್ಷ ಇರಬಹುದು, ಎರಡು ಲಕ್ಷ ಇರಬಹುದು. ಹೀಗೆ ಎಷ್ಟು ಇದೆ ಅಷ್ಟನ್ನು ರೆಮಿಟ್ ಮಾಡಿದಾಗ ಮಾತ್ರ, ನೀವು ಇದನ್ನು ಮಾಡಿದ್ದು ಸಾರ್ಥಕವಾಗುತ್ತದೆ. ಇಲ್ಲವಾದರೆ, ಹಣ ಯಾರದ್ದೊ ಎಕ್ಸ್‌ಮೆಶನ್ ಮಾತ್ರ ಸೊಸೈಟಿಗಳದ್ದು ಮತ್ತು ಬ್ಯಾಂಕ್‌ನವರದ್ದು ಹೋಗುತ್ತದೆ. ಅವುಗಳು ದಿವಾಳಿಯಾಗಿ ಮುಚ್ಚಿ ಹೋಗಿ, ನಿಂತು ಹೋಗಿ ಮುಂದಿನ ರೈತರಿಗೆ ಅನಾನುಕೂಲ ಮಾಡಿ ನೀವು ಹೋಗುತ್ತೀರಿ. ಅದಕ್ಕೆ ಒಂದು ಲಕ್ಷ ಜನರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳತಕ್ಕಂಥವರು 63 ಲಕ್ಷ ಜನರಿಗೆ ಈ ಮೂಲಕ ತೊಂದರೆ ಮಾಡತಕ್ಕಂಥಾದ್ದನ್ನು ದಯಮಾಡಿ ಮಾಡಬೇಡಿ. ಹಿಂದಕ್ಕೆ ಸಾಲ ಮಾಫಿ ಎಂದು ಕೊಟ್ಟಿದ್ದೀರಿ ಆ ದುಡ್ಡನ್ನು ತುಂಬಿದ್ದಾರೋ?

ಶ್ರೀ ಆರ್.ಎಲ್. ಜಾಲಪ್ಪ : ನೀವು ಹೀಗೆ ಯಾರದ್ದೋ ಹಣ ಅಂದರೆ ಆ ಹಣವನ್ನು ಎಲ್ಲಿಂದ ತಂದಿರುವುದು? ನಮಗೂ ಜವಾಬ್ದಾರಿ ಗೊತ್ತಿದೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಎಲ್ಲಾ ಡಿಸಿಸಿ ಬ್ಯಾಂಕ್‌ಗಳನ್ನ್ ದೊಡ್ಡ ಚಾವಿ ತೆಗೆದುಕೊಂಡು ಕ್ಲೋಸ್ ಮಾಡಿಬಿಡಿ. ಮಾನ್ಯ ಜಾಲಪ್ಪನವರು ಉತ್ತರ ಕೊಡುವಾಗ ನಾನು ಹೇಳಿದ್ದು ಸರಿಯಲ್ಲ ಎಂದು ವಾದ ಮಾಡಲಿ. 300 ಕೋಟಿ ರೂಪಾಯಿಗಳನ್ನು ನೀವು ಯಾವ ರೀತಿಯಾಗಿ ಭರಿಸುತ್ತೀರಿ ಎಂಬ ಬಗ್ಗೆ ನನಗೆ ಸಂಶಯ ಇದೆ. ಅದಕ್ಕೆ ಯಾವ ರೀತಿಯಾದ ತಯಾರಿ ನಿಮ್ಮಲ್ಲಿದೆ? ಪ್ರತಿಯೊಂದು ಬ್ಯಾಂಕ್‌ಗೆ ಯಾವ ರೀತಿಯಾಗಿ ಯಾವತ್ತು ರೆಮಿಟ್ ಮಾಡುತ್ತೀರಿ? ಜನವರಿ ಒಂದರಿಂದ ನೀವು ಇದನ್ನು ಪ್ರಾರಂಭ ಮಾಡುತ್ತೀರಿ, ಅದಕ್ಕಾಗಿ ನೀವು ಇದನ್ನೆಲ್ಲಾ ಹೇಳಬೇಕಾಗುತ್ತದೆ. ಆ ಎಲ್ಲಾ ವಿಚಾರಗಳನ್ನು ಹೇಳಿ.

ದಯವಿಟ್ಟು ಇದರ ಬಗ್ಗೆ ಕೂಡ ಸ್ಪಷ್ಟವಾಗಿ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಎರಡನೆಯದಾಗಿ ಕೃಷ್ಣ ಬೇಸಿನ್ ಬಗ್ಗೆ ಹೇಳಿದ್ದೀರಿ ಅದರ ಮೇಲೆ ಸಾಕಷ್ಟು ಬೆಳಕು ಚೆಲ್ಲಬೇಕಾಗಿದೆ, ಅದನ್ನೂ ಕೂಡ ತಮ್ಮ ಉತ್ತರದಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಪ್ರತಿವರ್ಷ 5 ವರ್ಷದಲ್ಲಿ ಎಷ್ಟು ಕೋಟಿ ರೂ.ಗಳನ್ನು ತಾವು ನಿಗಧಿ ಮಾಡಿದಿರಿ, ಮತ್ತು ಯಾವ್ಯಾವ ಏಜೆನ್ಸಿಯಿಂದ ಆ ಕೆಲಸ ಮಾಡಿಸುತ್ತೀರಿ, ಏಕೆಂದರೆ ಫೈನಾನ್‌ಸಿಯಲ್ ಟಾರ್ಗೆಟ್ ಒಂದು, ಫಿಜಿಕಲ್ ಟಾರ್ಗೆಟ್ ನೀವು ಕೊಡಬೇಕಾಗುತ್ತದೆ. ಬರೀ ಹಣ ಕೊಟ್ಟರೆ ಸಾಲದು. ನೀವೇನೋ ಒದಗಿಸುತ್ತೇವೆಂದು ಹೇಳಿದಿರಿ, ನೋಡೋಣ, ಎಷ್ಟು ಹಣ ಒದಗಿಸುತ್ತೀರಿ ಎಷ್ಟರಮಟ್ಟಿಗೆ ತಾವು ಸಹಾಯ ಮಾಡುತ್ತೀರಿ, ಅದು ಕಾದು ನೋಡಬೇಕಾಗಿದೆ. ಆದರೆ ಅದಕ್ಕೆ ತಕ್ಕಂತೆ ಅಚೀವ್‌ಮೆಂಟ್ ಮಾಡಬೇಕು, ಕಮಾಂಡ್ ಏರಿಯ ಅಭಿವೃದ್ಧಿ ಮಾಡಬೇಕು ಪಿಜಿಕಲ್ ಸಾಧನೆ ಮಾಡಬೇಕಾದರೆ ಅದಕ್ಕೇನು ತಯಾರಿ ನಡೆದಿದೆ ಎಂಬ ಬಗ್ಗೆ ಕೂಡ ಇಲ್ಲಿ ಸ್ಪಷ್ಟಪಡಿಸಿ. ಬರೀ ಕೃಷ್ಣ ಬೇಸಿನ್‌ನಲ್ಲಿ 2 ಸಾವಿರದೊಳಗೆ ನಾವು ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ ಎಂಬುದು ಇವತ್ತು ಜನರಲ್ ಸ್ಟೇಟ್‌ಮೆಂಟ್ ಮಾಡಿದ್ದೀರಿ. ನಾಲ್ಕನೆಯದು ಫಾರಿನ್ ಇನ್‌ವೆಸ್ಟ್‌ಮೆಂಟ್ ಬಗ್ಗೆ ತಾವೇನು ಹೇಳಿದಿರಿ. ಫಾರೀನ್ ಇನ್‌ವೆಸ್ಟ್‌ಮೆಂಟ್ ಅಥವಾ ಇಂಡಸ್ಟ್ರಿಯಲ್ಲಿ ಹೆಚ್ಚಿನ ಹಣವನ್ನು ಅಥವಾ ಎನ್‌ಆರ್‌ಐ ಹಣವನ್ನು ಇಲ್ಲಿ ಹೂಡಬೇಕಾದರೆ ಅದಕ್ಕೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಾವೊಂದು ಸಬ್‌ಕಮಿಟಿ ರಚಿಸಿದ್ದೇವೆ ಎಂದು ಹೇಳಿದ್ದೀರಿ. ಇದರ ಅವಶ್ಯಕತೆಯೇ ಇರಲಿಲ್ಲ.

ಏಕೆಂದರೆ ಅಧಿಕಾರಿಗಳದು ಹೈಪವರ್ ಕಮಿಟಿ ಇದೆ. ಸೆಕ್ರೆಟರಿ ಅದಕ್ಕೆ ಅಧ್ಯಕ್ಷರಾಗಿದ್ದಾರೆ ಮತ್ತು ಡೈರೆಕ್ಟರು ಇದ್ದಾರೆ. 550 ಕೋಟಿ ಕೆಳಗೆ ಇರುವ ಬಂಡವಾಳವನ್ನು ಹೂಡುವವರಿಗೆ ಒಂದು ಹೈಪವರ್ ಕಮಿಟಿ ಇದೆ, ಅದರ ನಿರ್ಣಯವನ್ನು ಅವರು ತೆಗೆದುಕೊಂಡು ನೇರವಾಗಿ ಕ್ಯಾಬಿನೆಟ್‌ಗೆ ಕಳಿಸಬೇಕು. ಇನ್ನೊಂದು 100 ಕೋಟಿಗಿಂತ ಹೆಚ್ಚು ಬಂಡವಾಳ ಯಾರು ಹೂಡುತ್ತಾರೋ ಅದಕ್ಕೂ ಕೂಡ ಸಂಬಂಧಿಸಿದ ಇಂಡಸ್ಟ್ರೀ ಮಿನಿಸ್ಟರ್ ಅಧ್ಯಕ್ಷತೆಯಲ್ಲಿ ಸಮಿತಿ ಅದನ್ನು ಸಂಬಂಧಪಟ್ಟ ಸೆಕ್ರಟರಿಗಳನ್ನು ಸೇರಿಸಿ ಒಂದು ಸಮಿತಿ ಮಾಡಿಕೊಂಡು ಪ್ರೊಸೀಡಿಂಗ್ಸ್ ಮಾಡಿ ಅದನ್ನು ನೇರವಾಗಿ ಕ್ಯಾಬಿನೆಟಗೆ ತಂದು ಅಪ್ರೂವ್ ಮಾಡುವುದು ಇದೆ. ಇವತ್ತು ನೀವು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದರಿಂದ ಏನಾಗುತ್ತದೆ ಎಂದರೆ ಇದು ಮತ್ತೆ ಫರ್ದರ್ ಡಿಲೆ, ಡೀಸೆಂಟ್ರಲೈಸ್ ಮಾಡಬೇಕೆಂದೇ ಅವತ್ತು ಮಾಡಿದ್ದುದು. ಏಕೆಂದರೆ ನೇರವಾಗಿ ಕ್ಯಾಬಿನೆಟ್‌ಗೆ ತಂದರೆ ಅಲ್ಲಿ ಡಿಸ್ಕಸ್ಸಾಗಿ ಫೈನಲೈಸಾಗಲಿ, ಹೊರದೇಶದಿಂದ ಬಂಡವಾಳ ತರುವವರಿಗೆ ಅವಕಾಶ ಮಾಡಿಕೊಡಬೇಕೆಂದು ಅವರಿಗೆ ಪವರ್ ಇರಲಿ, ವಾಟರ್ ಕನ್‌ಸಿಷನ್ ಇರಲಿ ಅಥವಾ ಸೇಲ್ಸ್‌ಟ್ಯಾಕ್ಸ್ ಕನ್‌ಸಿಷನ್ ಇರಲಿ ಜಮೀನದೇಲ ಇರಲಿ, ಆ ಸೌಲಭ್ಯಗಳನ್ನು ಕೊಡಬೇಕೆಂಬ ದೃಷ್ಟಿಯಿಂದಲೇ ಮತ್ತು ಶಾರ್ಟ್‌ಕಟ್‌ಮೆಡಡ್ ಮಾಡಬೇಕು. ಟೇಬಲ್ ಟುಟೇಬಲ್ ಹೋಗಿ ಮತ್ತೆ ಇದು ಫರ್ದರ್ ಡಿಲೆ ಆಗುವುದು ಬೇಡ. ಟೈಂ ಕನ್‌ಸ್ಯೂಮಿಂಗ್ ಬೇಡವೆಂದು ಷಾರ್ಟ್ ಕಟ್ ಮಾಡಿ. ಇವತ್ತು ಸರ್ಕಾರ ಒಂದು ನಿರ್ಣಯ ತೆಗೆದುಕೊಂಡ 40 ಸಾವಿರ ಕೋಟಿ ಬಂಡವಾಳ ಈ ರಾಜ್ಯಕ್ಕೆ ಬರುವ ರೀತಿಯಲ್ಲಿ ಒಂದು ವಾತಾವರಣ ತಯಾರಿಸಲಾಗಿತ್ತು. ಅದನ್ನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮಾಡಿದರೆ ಅನೇಕ ಸಾರಿ ಅವರಿಗೆ ಸಮಯ ಸಿಗುವುದಿಲ್ಲ, ಮತ್ತು ಆ ಇಂಡಸ್ಟ್ರಿಯಲಿಸ್ಟ್‌ಗೆ ಏನು ಬೇಕೋ ಅದನ್ನು ಹೇಳಿಕೊಳ್ಳುವುದಕ್ಕೆ ಕಷ್ಟ. ಅವರು ಸೆಕ್ರೆಟರಿಗೆ ವಿವರಿಸಬೇಕು, ಪುನಃ ಕೈಗಾರಿಕಾ ಸಚಿವರಿಗೆ ಬ್ರೀಫ್ ಮಾಡಬೇಕು ಪುನಃ ಕ್ಯಾಬಿನೆಟ್ ಸಬ್ ಕಮಿಟಿ, ಆ ಕಮಿಟಿಯಲ್ಲಿ ಅರ್ಥಸಚಿವರು, ನಗರಾಭಿವೃದ್ಧಿ ಸಚಿವರು ಕೈಗಾರಿಕೆ ಸಚಿವರು

ಮತ್ತು ಕಂದಾಯ ಸಚಿವರು - ಹೀಗೆ 6-7ಜನ ಸೇರಿ ಆ ನಿರ್ಣಯ ತೆಗೆದುಕೊಳ್ಳಬೇಕು. ಅಂದರೆ ಪ್ರತಿ 15 ದಿವಸಕ್ಕೆ ಅಥವಾ ತಿಂಗಳಿಗೊಂದು ಭೇಟಿ ಆಗುವ ಸಮಿತಿ ಮುಂದೆ 3-4-5 ತಿಂಗಳಾದರೂ ಕೂಡ ಕೆಲಸ ಆಗುವುದಿಲ್ಲ, ಇದು ತಿಳಿದುಕೊಳ್ಳಿ. ಪ್ರಾಕ್ಟಿಕಲ್ ಆಗಿ ಹೇಳುತ್ತಿದ್ದೇನೆ. ಏಕೆಂದರೆ ಎಷ್ಟೊಂದು ನಾವು ನೋಡಿದ್ದೇವೆ. ಸಬ್ ಕಮಿಟಿ ಮಾಡಿದರೆ ಇಷ್ಯೂಗಳು ಬರೀ ಪೋಸ್ಟ್‌ಪೋನಾಗುತ್ತವೆ ಹೊರತಾಗಿ ಸೆಟಲ್ ಆಗುವುದಿಲ್ಲ ಅದಕ್ಕಾಗಿ ಈಗಿರುವ ವ್ಯವಸ್ಥೆಯನ್ನೇ ಕಂಟಿನ್ಯೂ ಮಾಡಿ. ಬೇಕಾದರೆ ನಿಮಗೆ ವಿಶ್ವಾಸವಿರುವ ಅಧಿಕಾರಿಗಳನ್ನೇ ಹಾಕಿಕೊಂಡು, ಇವತ್ತೇನು ಸಚಿವರಿದ್ದಾರೆ ಅವರ ಅಧ್ಯಕ್ಷತೆಯಲ್ಲೇ ಇದನ್ನು ಬಗೆಹರಿಸುವುದನ್ನು ನೀವು ಮಾಡಿದರೆ ಹೆಚ್ಚಿನ ಬಂಡವಾಳ ನಮ್ಮ ಕರ್ನಾಟಕ ರಾಜ್ಯಕ್ಕೆ ಬರುತ್ತದೆ.

ನಾನು ಹೆಮ್ಮೆಯಿಂದ ಹೇಳುತ್ತೇನೆ. ಗುಜರಾತ್, ಮಹಾರಾಷ್ಟ್ರ ಆದ ಮೇಲೆ ಹೆಚ್ಚಿನ ಬಂಡವಾಳವನ್ನು ಕರ್ನಾಟಕದಲ್ಲಿ ಹೂಡುವುದಕ್ಕೆ ಜನ ಇಷ್ಟಪಡುತ್ತಿದ್ದಾರೆ. ಆ ವಾತಾವರಣವನ್ನು ಹಿಂದಿನ ಸರಕಾರ ನಿರ್ಮಾಣ ಮಾಡಿದೆ, ನೀವು ಆ ವಾತಾವರಣವನ್ನು ಕೆಡಿಸುವುದಕ್ಕೆ ಹೋಗಬೇಡಿ. ಯಾವುದೇ ಸರಕಾರವಿರಬಹುದು ಹೆಚ್ಚಿನ ಉದ್ಯೋಗಗಳು ಈ ಭಾಗದಲ್ಲಿ ಬಂದರೆ ಹೆಚ್ಚಿನ ಜನರಿಗೆ ಕೆಲಸ ಸಿಗುತ್ತದೆ ಆದಾಯ ಹೆಚ್ಚಾಗುತ್ತದೆ ಸೇಲ್ಸ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ಬರುತ್ತದೆ ಅನೇಕ ಆನ್ಸಿಲಿಯರಿ ಕೈಗಾರಿಕೆಗಳೂ ಕೂಡ ಬರುತ್ತವೆ. ಅದನ್ನು ಗಮನದಲ್ಲಿಟ್ಟುಕೊಂಡು ಮಾಡಿದರೆ ಸರಿ. ಒಂದು ಕಡೆ ಎಲ್ಲವನ್ನೂ ಡೀ ಸೆಂಟ್ರಲೈಸೇಷನ್ ಆಫ್ ಪವರ್ ಎಂದು ಹೇಳುತ್ತೀರಿ ಇದಕ್ಕೇಕೆ ಬೇಕು ನನಗೆ ತಿಳಿಯುವುದಿಲ್ಲ.

ಡಾ॥ ಜೀವರಾಜ್ ಆಳ್ವ : ಹಿಂದಿನ ಮುಖ್ಯ ಮಂತ್ರಿಯವರಾದ ಮಾನ್ಯ ಮೊಯಿಲಿಯವರು ಹೇಳಿದ್ದನ್ನು ಇವರು ನಂಬಿದ್ದರೋ ಎನ್ನುವುದು ನನ್ನ ಪ್ರಶ್ನೆ. 40 ಸಾವಿರ ಕೋಟಿ ಎಂದು ಹೇಳಿ ಅವರನ್ನು ಮುಜುಗರದಲ್ಲಿ ಹಾಕುವುದು ಬೇಡ. ಏಕೆಂದರೆ it is a very very inflated figure. It's an impossible figure. ವಿರೋಧ ಪಕ್ಷದ ನಾಯಕರು ನಮ್ಮ ಮಿತ್ರರಾದ ಮಾನ್ಯ ಖರ್ಗೆಯವರು ಹೇಳಿದಾಗ ಅದು ಕಡತಕ್ಕೆ ಹೋದಾಗ it is just an absolutely exaggerated superlated.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು 5 ವರ್ಷ ಅಧಿಕಾರದಲ್ಲಿದ್ದಿರಿ ನಿಮ್ಮ ಕಾಲದಲ್ಲಿ 50 ಜನರಿಗೆ ಉದ್ಯೋಗ ಸಿಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ದಿವಸದಲ್ಲಿ ವಿಧಾನಸೌಧ ಕಟ್ಟಲಿಕ್ಕಾಗಿಲ್ಲ. ವಿಧಾನಸೌಧ ಕಟಿಸುವುದಕ್ಕೆ 5 ವರ್ಷ ಕಟ್ಟಿದಂತಹ ಪುಣ್ಯಾತ್ಮ ಇಲ್ಲಿ ಕೊಡುವುದಕ್ಕಾಗಲಿಲ್ಲ ನೀವು ನಾವು ಕುಳಿತಿದ್ದೇವೆ. ಹಾಗೇ ಯಾರೋ ಕಟ್ಟುತ್ತಾರೆ ಅದರ ಲಾಭ ಮುಂದಿನವರಿಗೆ ಸಿಗುತ್ತದೆ. ಜಿಂದಾಲ್ ಬಗ್ಗೆ ಹೊಸಪೇಟೆಯಲ್ಲಿ ಬಂದಂತಹ ಸದಸ್ಯರಿಗೆ ತಿಳಿದಿರಬಹುದು ಅಲ್ಲಿ ಕೆಲಸ ನಡೆದಿದೆ. ಮಂಗಳೂರಿನಿಂದ ಅನೇಕ ಬಿ.ಜೆ.ಪಿ. ಸದಸ್ಯರು ಬಂದಿದ್ದಾರೆ ಅವರನ್ನು ಕೇಳಿ ಪ್ರಾರಂಭವಾಗಿದೆಯೋ ಇಲ್ಲವೋ. 1-2 ಪ್ರಾಜೆಕ್ಟ್ ಹೆಚ್ಚೂ ಕಡಿಮೆ ಆಗಿರಬಹುದು; ಕೆಲವು ಸಲ ನಾವು ಕನ್‌ಸೆಷನ್ ಕೊಡುತ್ತೇವೆಂದು ಹೇಳಿದಾಗ ಒಪ್ಪುತ್ತಾರೆ. ಪುನಃ ಅದಕ್ಕಿಂತ ಬೆಟರ್ ಕನ್‌ಸೆಷನ್ ಬೇರೆ ಕಡೆ ಕೊಡುತ್ತೇವೆಂದು ಹೇಳಿದಾಗ ಅವರು ಶಿಫ್ಟ್ ಮಾಡಿಕೊಳ್ಳುತ್ತಾರೆ.

ಡಾ॥ ಜೀವರಾಜ್ ಆಳ್ವ : ಇದು ಇಡೀ ರಾಷ್ಟ್ರಕ್ಕೆ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಹಿಂದಿನ ಮುಖ್ಯ ಮಂತ್ರಿಗಳಾದ ಬಂಗಾರಪ್ಪನವರು ಥರ್ಮಲ್ ಪ್ರಾಜೆಕ್ಟ್ ವಿಚಾರದಲ್ಲಿ ಮೆಮೊರ್ಯಾಂಡಮ್ ಆಫ್ ಅಂಡರ್ ಸ್ಟ್ಯಾಂಡಿಗ್ ಮಾಡಿದರು ಬಹಳ ಹೆಮ್ಮೆಯಿಂದ ಅದನ್ನು ಹೇಳಿದರು. ವಿಜಯನಗರ ಸ್ಟೀಲ್ ಪ್ಲಾಂಟ್ ಆಗುತ್ತಿದೆ 40

ಸಾವಿರ ಕೋಟಿ ಬಗ್ಗೆ ಮೆಮೊರ್ಯಾಂಡಮ್ ಅಂಡರ್‌ಸ್ಟ್ಯಾಂಡಿಂಗ್ ಕನ್‌ಸೆಂಟ್ ಲೆಟರ್, ಸರಕಾರಿ ವ್ಯವಸ್ಥೆ ಬಗ್ಗೆ ಹೇಳಿದ್ದಾರೆ. ಆದರೆ ನಮ್ಮ ಪ್ರಶ್ನೆ ಇಷ್ಟೆ. ಇವತ್ತು ಇಲ್ಲಿ ಬರುವಂತಹ ಯಾವುದೇ ವ್ಯಕ್ತಿ Including Vijayanagar Steel plant they are apprenesive, because you are not equipped.

ಇದು ಸತ್ಯ ನಿಜ ಸಂಗತಿ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡೋಣ. ಕೊನೆಗೆ end of the day we will have nothing left. ಕರೆಂಟ್ ಇಲ್ಲ, ಇನ್‌ಫ್ರಾಸ್ಟ್ರಕ್ಚರ್ ಇಲ್ಲ, ನಿಮ್ಮಲ್ಲಿ ವ್ಯವಸ್ಥೆ ಇಲ್ಲ, ನೀರು ಇಲ್ಲ, ಆದ್ದರಿಂದ ಸುಮ್ಮನೆ ಯಾವುದೋ ಕಾಣದ ಕನಸಿನಂಥ ಸಾಗರವನ್ನು, ಒಂದು ಅಂತಃಪುರವನ್ನು ಕಟ್ಟುವುದು ಬೇಡ. ರಿಯ್ಯಾಲಿಟಿ ಮಾಡೋಣ. ಇನ್‌ಫ್ರಾಸ್ಟ್ರಕ್ಚರ್ ಮಾಡೋಣ. ಹೊಸ ವ್ಯವಸ್ಥೆಗೆ ಹೆಚ್ಚಿನ ಸಹಕಾರ ಕೊಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ,

ಉಪಾಧ್ಯಕ್ಷರು : ನಿಮಗೆ ಇನ್ನೂ ಎಷ್ಟು ಸಮಯ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೆ ಇನ್ನೂ 15-20 ನಿಮಿಷ ಬೇಕಾಗುತ್ತದೆ.

ಉಪಾಧ್ಯಕ್ಷರು : ಹಾಗಾದರೆ ಲಂಚ್ ಬ್ರೇಕ್ ನಂತರ ತಾವು ಮಾತನಾಡಬಹುದಲ್ಲವೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು, ನನಗೆ ಒಂದು ಕಡೆ ಬಿ.ಜೆ.ಪಿ. ಯವರ ಕಾಟ, ಒಂದು ಕಡೆ ಜನತಾದಳದವರ ಕಾಟ ಇವರ ಮಧ್ಯದಲ್ಲಿ ನಾವು ಸಿಕ್ಕಿಕೊಂಡು ಒದ್ದಾಡುತ್ತಿರುವಾಗ ನಮ್ಮನ್ನು ನೀವೇ ರಕ್ಷಣೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಎಂಟು ಗಂಟೆಯವರೆಗೂ ನಾವು ಕುಳಿತುಕೊಳ್ಳಬೇಕು ಎಂದು ಯೋಚನೆ ಮಾಡಿದ್ದೇವೆ. ಅದಕ್ಕೋಸ್ಕರ ದಯಮಾಡಿ ಬೇರೆಯವರನ್ನು ಕೂಡಿಸಿ. ಊಟಕ್ಕೆ ಬಿಡುವ ಅಗತ್ಯವಿಲ್ಲ, ನಾವೆಲ್ಲಾ ಹೋಗಿ ಬಂದು ಮಾಡುತ್ತಿದ್ದೇವೆ. ಸದನದ ಕಾರ್ಯಕಲಾಪ ನಡೆಯಬೇಕಾಗಿದೆ. ಲಂಚ್‌ಬ್ರೇಕ್ ಬೇಡ ಎಂದು. ಏಕೆಂದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತಾಗ ನೀವು ಲಂಚ್‌ಗೆ ಬಿಟ್ಟರೆ ನನ್ನ ಅಭ್ಯಂತರವಿಲ್ಲ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತಾಗ ನಾವು ಚರ್ಚೆ ಮಾಡಿದಾಗ ಬಂದಿರುವಂಥ ತೀರ್ಮಾನ ದಯಮಾಡಿ ಮಧ್ಯದಲ್ಲಿ ಬ್ರೇಕ್ ಮಾಡದೆ ಎಂಟು ಗಂಟೆಯಾದರೂ ಕುಳಿತುಕೊಳ್ಳಬೇಕು. ಭಾಗವಹಿಸುವವರು ತುಂಬಾ ಜನ ಇದ್ದಾರೆ ಎಂದು ಯೋಚಿಸಿದೆವು. ಸಲಹೆ ಕೊಡುತ್ತಿದ್ದೇನೆ. ಸದನ ಒಪ್ಪಿದರೆ ನಮ್ಮ ಸಲಹೆಯನ್ನು ಸ್ವೀಕರಿಸಿ. ಇಲ್ಲದಿದ್ದರೆ ನೀವು ಹೇಗೆ ಮಾಡುತ್ತೀರೋ ಹಾಗೆ ಮಾಡಿ.

ಉಪಾಧ್ಯಕ್ಷರು : ಈಗ ನಮ್ಮ ಪ್ರೋಗ್ರಾಮ್ ಪ್ರಕಾರ ಮುಂಜಾನೆ 9-30 ರಿಂದ 1-30 ರವರೆಗೆ ಎಂದು ಇತ್ತು. ಆಮೇಲೆ 2-30 ರಿಂದ 6-30 ರವರೆಗೆ ಪ್ರೋಗ್ರಾಮ್. ಆ ವಿಷಯ ಹೇಳುತ್ತಿದ್ದೇನೆ. ಒಂದು ವೇಳೆ ಸದಸ್ಯರು ಆಪೇಕ್ಷೆ ಪಡದಿದ್ದರೆ ಬೇಡ.

ಶ್ರೀ ಸಿ. ಭೈರೇಗೌಡ : ಈಗ ನಮ್ಮ ಕಡೆ ಸದಸ್ಯರು ಕಡಿಮೆ ಇದ್ದಾರೆ. ಊಟ ಮಾಡಬೇಕಾಗಿದೆ. ಅದರಿಂದ ನಾವು ಲಂಚ್‌ಗೆ ಬ್ರೇಕ್ ಮಾಡೋಣ.

ಪ್ರಕಟಣೆ - 1

ಉಪಾಧ್ಯಕ್ಷರು : ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ವಿಧಾನಸಭೆಯಲ್ಲಿ ಕಾಂಗ್ರೆಸ್ (ಐ) ಪಕ್ಷದ ನಾಯಕರಾಗಿ ಚುನಾಯಿಸಿದ್ದೇವೆಂದು ತಿಳಿಸುವ ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಸಮಿತಿಯ ಅಧ್ಯಕ್ಷರ ಪತ್ರವೊಂದು ನನಗೆ ಬಂದಿದೆ.